# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## <u>ದಿನಾಂಕ: 28.08.2012 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು</u>

| ಹಾಜರಿದ್ದ ಸದಸ್ಯರು | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|
| ಎಂ.ಕೃಷ್ಣಪ್ಪ | ಅಧ್ಯಕ್ಷರು | ಜಂಟಿ ಆಯುಕ್ತರು (ಕಲ್ಯಾಣ) |
| ಡಾ.ಎಸ್.ರಾಜು | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ಬಿ.ಆರ್.ಚಂದ್ರಶೇಖರ್ | ಸದಸ್ಯರು | ಉಪ ಆಯುಕ್ತರು (ಕಲ್ಯಾಣ) |
| ಪಿ.ಧನರಾಜ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ /ಬ್ಯಾಟರಾಯನಪುರ |
| ಸವಿತ ರಮೇಶ್ | ಸದಸ್ಯರು | |
| ಎನ್.ಚಂದ್ರ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (/ಬಿಎಸ್.ಯು.ಪಿ/ |
| ಅರ್.ಸಂಪತ್‌ರಾಜ್ | ಸದಸ್ಯರು | |
| ಪಿ.ಎಂ.ಸರೋಜ | ಸದಸ್ಯರು | ಕಲ್ಯಾಣಾಧಿಕಾರಿ ( ಮಹದೇವಪುರ /ದಾಸರಹಳ್ಳಿ /ರಾರಾನ. |
| ಇಂದಿರಾ | ಸದಸ್ಯರು | |
| ಲಲಿತ | ಸದಸ್ಯರು | |
| ಯಶೋದ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## <u>01. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 18/12–13</u>

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:12.04.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ 174, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ವಿಷಯ ಸಂಖ್ಯೆ:287/2011–12 ದಿನಾಂಕ 24.12.2011 ರಲ್ಲಿ ತೀರ್ಮಾನಿಸಿರುವಂತೆ ಪರಿಶಿಷ್ಟ ಜಾತಿ/ಪಂಗಡದ ಮನೆಗಳಿಗೆ ▫.150.00 ಲಕ್ಷ ಮತ್ತು ಉಳಿದ ಕಾಮಗಾರಿಗಳಿಗೆ ▫.260.00 ಲಕ್ಷ ಒದಗಿಸಲಾಗಿದೆ. ಈ ವಿಷಯವನ್ನು ಕುರಿತು 2011–12ನೇ ಸಾಲಿನಲ್ಲಿ ದಿನಾಂಕ 24.12.2012ರ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಿರ್ಣಯದಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುದಾನವನ್ನು ನಿಗಧಿಪಡಿಸಿ ಕ್ರಿಯಾ ಯೋಜನೆಯನ್ನು ಅನುಮೋದಿಸಿಕೊಡಲು ದಿನಾಂಕ 19.03.2012ರಂದು ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಕಂಡಿಕೆ 44ರಲ್ಲಿ ಅಪರ ಆಯುಕ್ತರು ಕಲ್ಯಾಣರವರು ವಿವರಿಸಿರುವಂತೆ ದಿನಾಂಕ 31.03.2012 ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಕ್ರಿಯಾ ಯೋಜನೆಯನ್ನು ಅನುಮೋದಿಸಿರುವಂತೆ ಹೆಚ್.ಎಸ್.ಆರ್. ವಾರ್ಡ್ ಸಂಖ್ಯೆ 174 ಕ್ಕೆ ▫.121.21 ಲಕ್ಷ ಅನುದಾನವನ್ನು ನಿಗಧಿಪಡಿಸಿದ್ದು ಅದರನ್ವಯ ಕಾಮಗಾರಿಗಳಿಗೆ ▫.573.00 ಲಕ್ಷ ಮತ್ತು ಮನೆ

ನಿರ್ಮಾಣಗಳಿಗೆ ￭.8.64 ಲಕ್ಷ ಲಭ್ಯವಿರುತ್ತದೆ. ಈ ಮೊತ್ತಕ್ಕೆ ಸೀಮಿತಗೊಳಿಸಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿದ್ದಾರೆ.

ಕಂಡಿಕೆ 45ರಲ್ಲಿ ವಿಶೇಷ ಆಯುಕ್ತರು ಪ್ರಸ್ತಾವನೆಯಲ್ಲಿ ಹೇಳಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿ 2011–12ನೇ ಸಾಲಿಗೆ ಮನೆಗಳ ನಿರ್ಮಾಣಕ್ಕೆ ￭.150.00 ಲಕ್ಷಗಳನ್ನು ಒದಗಿಸಿ, ಉಳಿದ ಕಾಮಗಾರಿಗಳಿಗೆ ಅಂದರೆ ವಿಷಯ ಸಂಖ್ಯೆ:287/2011–12 ದಿನಾಂಕ 24.12.2011 ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಈಗಾಗಲೇ ತೀರ್ಮಾನಿಸಿರುವಂತೆ ￭.260.00 ಲಕ್ಷಗಳ ಅನುದಾನವನ್ನು 2012–13 ನೇ ಸಾಲಿಗೆ ಒದಗಿಸುವ ಬಗ್ಗೆ ನಿರ್ಣಯ ಕೈಗೊಳ್ಳಬಹುದಾಗಿದೆ ಎಂದು ಸೂಚಿಸಿದ್ದಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ 2011–12ನೇ ಸಾಲಿನ ಸಾಲಿನ ಮನೆಗಳ ನಿರ್ಮಾಣಕ್ಕೆ ￭.150.00 ಲಕ್ಷಗಳನ್ನು ಮತ್ತು ಕಾಮಗಾರಿಗಳ ಅನುಷ್ಠಾನಕ್ಕಾಗಿ 2012–13ನೇ ಸಾಲಿಗೆ ￭.260.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿ ಕ್ರಿಯಾ ಯೋಜನೆಯ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

– ಮುಂದೂಡಿದೆ –

## 02. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 58/12–13

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:21.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ವಾರ್ಡ್ 7, ಬ್ಯಾಟರಾಯನಪುರದ ಪಾಲಿಕೆ ಸದಸ್ಯರಾದ ಶ್ರೀಮತಿ ಇಂದಿರಾರವರು ಪತ್ರ ನೀಡಿ ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದವರ ಜನಸಂಖ್ಯೆ ಹೆಚ್ಚಿದ್ದು, ಹೆಚ್ಚಿನ ಕುಟುಂಬಗಳಿಗೆ ವಾಸಮಾಡಲು ಮನೆಗಳು ಇಲ್ಲದೇ ಸಣ್ಣ ಸಣ್ಣ ಹೆಂಚಿನ ಮನೆ ಮತ್ತು ಗುಡಿಸಲು ಮನೆಗಳಲ್ಲಿ ವಾಸ ಮಾಡುತ್ತಿದ್ದು, ಬಡತನ ರೇಖೆಗಿಂತ ಕೆಳಹಂತಕ್ಕೆ ಸೇರಿದ ಬಡವರು ವಾಸದ ಮನೆಗಳನ್ನು ನಿರ್ಮಿಸಿಕೊಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಪ.ಜಾ/ಪ.ಪಂ.ದವರ ಜನಸಂಖ್ಯೆ ಹೆಚ್ಚಿರುವ ಈ ಕೆಳಗಿನ ಪ್ರದೇಶಗಳಲ್ಲಿ ಪ.ಜಾ/ಪ.ಪಂ.ದವರಿಗೆ ವೈಯುಕ್ತಿಕ ಮನೆ ನಿರ್ಮಾಣ ಮಾಡಲು ತಗಲುವ ವೆಚ್ಚಕ್ಕೆ ಶೇಕಡ 22.75ರ ಅನುದಾನದಡಿಯಲ್ಲಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

| ಕ್ರ. ಸಂ. | ಗ್ರಾಮ/ಹಳ್ಳಿಯ ಹೆಸರು | ಫಲಾನುಭವಿಗಳ ಸಂಖ್ಯೆ | ಅಂದಾಜು ಮೊತ್ತ ಪ್ರತಿ ಮನೆಗೆ ￭.ಲಕ್ಷಗಳಲ್ಲಿ | ಒಟ್ಟು ಅನುದಾನ ￭.ಲಕ್ಷಗಳಲ್ಲಿ |
|---|---|---|---|---|
| 1 | ಜಕ್ಕೂರು ಸ್ಲಮ್ ಬಡಾವಣೆ | 16 | 3.00 | 48.00 |
| 2 | ಜಕ್ಕೂರು ಗ್ರಾಮ | 16 | 3.00 | 48.00 |
| 3 | ಜಕ್ಕೂರು ಗ್ರಾಮ – ಪೇಸ್ 2 | 08 | 3.00 | 24.00 |
| 4 | ಸಂಜೀವಿನಿ ನಗರ ಸ್ಲಮ್ | 16 | 3.00 | 48.00 |
| 5 | ಅಮೃತಹಳ್ಳಿ ಗ್ರಾಮ | 16 | 3.00 | 48.00 |
| 6 | ಬ್ಯಾಟರಾಯನಪುರ ಗ್ರಾಮ | 06 | 3.00 | 18.00 |
| **ಒಟ್ಟು** | | **78** | | **234.00** |

ಈ ಹಿನ್ನೆಲೆಯಲ್ಲಿ ಪಾಲಿಕೆ ಸದಸ್ಯರ ಕೋರಿಕೆಯಂತೆ ಪ.ಜಾ/ಪ.ಪಂ.ದವರ ಜನಸಂಖ್ಯೆ ಹೆಚ್ಚಿರುವ ಮೇಲಿನ ಪ್ರದೇಶಗಳಲ್ಲಿ ಪ.ಜಾ/ಪ.ಪಂ.ದವರಿಗೆ ವೈಯುಕ್ತಿಕ ಮನೆ ನಿರ್ಮಾಣ ಮಾಡಲು ಶೇಕಡ 22.75ರ ಅನುದಾನದಡಿಯಲ್ಲಿ ￭.234.00 ಲಕ್ಷಗಳ ವಿಶೇಷ ಅನುದಾನವನ್ನು ಮಂಜೂರು ಮಾಡಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 21.06.2012ರ ಟಿಪ್ಪಣಿಯನ್ನು ಒಪ್ಪುತ್ತಾ,

ಫಲಾನುಭವಿಗಳಿಗೆ ತ್ವರಿತವಾಗಿ ಮನೆ ನಿರ್ಮಾಣ ಮಾಡಬೇಕಾಗಿರುವುದರಿಂದ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 03. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 75/12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:17.07.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 7ರ ಜಕ್ಕೂರು ಬಡಾವಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಜಕ್ಕೂರು ಬಡಾವಣೆಯ 18 ಅಡ್ಡರಸ್ತೆಗಳು ಹಾಗೂ 3 ಮುಖ್ಯರಸ್ತೆಗಳನ್ನು ಬೆಂಗಳೂರು ಒಳಚರಂಡಿ ಇಲಾಖೆಯವರು ಸಂಪೂರ್ಣವಾಗಿ ರಸ್ತೆಗಳನ್ನು ಅಗೆದಿದ್ದು ಇದರಿಂದಾಗಿ ಎಲ್ಲಾ ಕ್ರಾಸ್ ರಸ್ತೆಗಳು, ಮತ್ತು ಮುಖ್ಯರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಸಾರ್ವಜನಿಕರು ಮತ್ತು ವಾಹನಗಳು ಓಡಾಡಲು ತುಂಬಾ ತೊಂದರೆಯಾಗಿರುತ್ತದೆ. ಈ ಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದು, ಈ ರಸ್ತೆಗಳನ್ನು ಸರಿಪಡಿಸಲು ಪಾಲಿಕೆ ಸದಸ್ಯರು ಶೇಕಡ 22.75ರ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಸ್ಥಳ ಪರಿಶೀಲನೆ ಮಾಡಿ ಜಕ್ಕೂರು ಬಡಾವಣೆಯಲ್ಲಿ 18 ಅಡ್ಡರಸ್ತೆಗಳು ಹಾಗೂ 3 ಮುಖ್ಯರಸ್ತೆಗಳಲ್ಲಿ ಯು.ಜಿ.ಡಿ ಅಳವಡಿಸಲು ರಸ್ತೆಗಳನ್ನು ಅಗೆದಿರುವುದು ಗಮನಿಸಲಾಗಿದ್ದು, ತಕ್ಕಂತೆ ರಸ್ತೆಯನ್ನು ಸರಿಪಡಿಸಲು 2011–12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ಆಧಾರದ ಮೇಲೆ ▫.300.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಾರ್ಡ್ ಸಂಖ್ಯೆ 7ರ ಜಕ್ಕೂರು ಬಡಾವಣೆಯಲ್ಲಿ ಶೇಕಡ 22.75ರ ಅನುದಾನದಲ್ಲಿ ಕಾಮಗಾರಿ ನಿರ್ವಹಿಸಲು ಬೇಕಾದ ಅನುದಾನ ▫.300.00 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ಮುಂದೂಡಿದೆ

## 04. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 80 /12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:19.07.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 47ರ ದೇವರಜೀವನಹಳ್ಳಿ ಮಾಹಾನಗರ ಪಾಲಿಕೆ ಮಾನ್ಯ ಸದಸ್ಯರಾದ ಶ್ರೀ ಆರ್. ಸಂಪತ್‌ರಾಜ್‌ರವರು ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರಿಗೆ ಉಲ್ಲೇಖದಲ್ಲಿನ ಮನವಿಯನ್ನು ಸಲ್ಲಿಸಿ, ಅವರು ಪ್ರತಿನಿಧಿಸುವ ವಾರ್ಡ್ 47ರಲ್ಲಿ ಸುಮಾರು 40 ವರ್ಷಗಳಿಂದ 14 ದೇವಸ್ಥಾನಗಳು ಪರಿಶಿಷ್ಟ ಜಾತಿಯ ಜನರು ಪೂಜೆಯನ್ನು ನಡೆಸುತ್ತಿದ್ದು, ಸದರಿ ದೇವಸ್ಥಾನಗಳು ಶಿಥಿಲಾವಸ್ಥೆಯಲ್ಲಿದ್ದು, ಯಾವುದೇ ಅಭಿವೃದ್ಧಿ ಕಂಡಿರುವುದಿಲ್ಲ ಹಾಗೂ ಅರ್ಚಕರಿಗೆ ಕೊಠಡಿ ಸೌಲಭ್ಯಗಳಿರುವುದಿಲ್ಲ. ಆದ್ದರಿಂದ ಶೇಕಡ 22.75ರ ಅನುದಾನದಡಿಯಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ಕೋರಿರುತ್ತಾರೆ.

ಮಾನ್ಯ ಸದಸ್ಯರ ಪತ್ರದಲ್ಲಿ, ಸದರಿ ವಿಷಯವನ್ನು ಪ್ರಸ್ತಾಪಿಸಲು ಮಾನ್ಯ ಜಂಟಿ ಆಯುಕ್ತರು (ಪೂ) ರವರು ಆದೇಶಿಸಿರುತ್ತಾರೆ.

ಅದರಂತೆ ವಾರ್ಡ್ ಸಂಖ್ಯೆ 47ರ ದೇವರಜೀವನಹಳ್ಳಿ ಒಟ್ಟು 14 ದೇವಸ್ಥಾನಗಳು ಪರಿಶಿಷ್ಟ ಜಾತಿಯ ಜನರು ಪೂಜಿಸುವ ದೇವಸ್ಥಾನಗಳಾಗಿದ್ದು, ಸದರಿ ದೇವಸ್ಥಾನಗಳ ಅಭಿವೃದ್ಧಿಯನ್ನು ಶೇಕಡ 22.75ರ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ಅಂದಾಜುಗಳನ್ನು ಪ್ರತಿ ಅಂದಾಜಿಗೆ ▫.4.00 ಲಕ್ಷಗಳಂತೆ ಲೋಕೋಪಯೋಗಿ ಇಲಾಖೆಯ ದರಪಟ್ಟಿ 2011–12ರಂತೆ ತಯಾರಿಸಲಾಗಿದೆ.

ಸದರಿ ಅಂದಾಜುಗಳಿಗೆ ಕಾಮಗಾರಿ ಸಂಕೇತ, ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಕಾಮಗಾರಿಗಳು ದೇವಸ್ಥಾನದ ಅಭಿವೃದ್ಧಿ ಹಿತದೃಷ್ಟಿಯಿಂದ ಅವಶ್ಯಕವಾಗಿರುತ್ತದೆ. ಆದ್ದರಿಂದ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಈ ಕೆಳಕಂಡ 14 ಕಾಮಗಾರಿಗಳಿಗೆ ▫.56.00 ಲಕ್ಷಗಳ ಅಂದಾಜು ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (▫.ಲಕ್ಷಗಳಲ್ಲಿ) |
|---|---|---|
| 1 | ಬಂಗಾರಗಿರಿ ನಗರದಲ್ಲಿ ನಡೆಸುತ್ತಿರುವ ಶ್ರೀ ವಿನಾಯಕ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 2 | ಬಂಗಾರಗಿರಿ ನಗರದಲ್ಲಿ ನಡೆಸುತ್ತಿರುವ ಶ್ರೀ ಓಂ ಶಕ್ತಿ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 3 | ಶ್ರೀನಿವಾಸ ನಗರದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 4 | ಈದ್ಗಾ ಮೊಹಲ್ಲಾದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 5 | ರಮಾಬಾಯಿ ನಗರದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 6 | ಎಸ್.ಪಿ.ಫ್ಯಾಕ್ಟರಿಯ ಹತ್ತಿರದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 7 | ದೊಡ್ಡಣ್ಣನಗರ 'ಇ' ಬ್ಲಾಕ್‌ನಲ್ಲಿ ದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 8 | ದೊಡ್ಡಣ್ಣನಗರದಲ್ಲಿ ನಡೆಸುತ್ತಿರುವ ಶ್ರೀ ಕರುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 9 | ಕಾಯಿಯಪ್ಪ ರಸ್ತೆಯಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 10 | ಸುಜನ ನಗರದಲ್ಲಿ ನಡೆಸುತ್ತಿರುವ ಶ್ರೀ ಮುನೇಶ್ವರ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 11 | ತಂಗಮಲೈನಗರದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 12 | ಸುಗರ್ ಮುಂಡಿಯಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 13 | ವರಲಕ್ಷ್ಮೀನಗರದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| 14 | ಈದ್ಗಾ ಮೊಹಲ್ಲಾದಲ್ಲಿ ನಡೆಸುತ್ತಿರುವ ಶ್ರೀ ಮುತ್ತುಮಾರಿಯಮ್ಮನ ದೇವಸ್ಥಾನದ ಅಭಿವೃದ್ಧಿ ಮಾಡುವ ಬಗ್ಗೆ | 4.00 |
| **ಒಟ್ಟು ಮೊತ್ತ** | | **56.00** |

ಮೇಲ್ಕಂಡ 14 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ▫.56.00 ಲಕ್ಷಗಳನ್ನು ಶೇಕಡ 22.75ರ ಅನುದಾನದಡಿಯಲ್ಲಿ ಕೈಗೊಳ್ಳಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

–ಮುಂದೂಡಿದೆ–

## 05. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 82/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:23.07.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪುಲಿಕೇಶಿನಗರ ಉಪವಿಭಾಗದ ವಾರ್ಡ್ ಸಂಖ್ಯೆ 47ರ ದೇವರಜೀವನಹಳ್ಳಿಯು ಹಿಂದುಳಿದ ವರ್ಗದವರು ವಾಶವಾಗಿರುವ ವಾರ್ಡ್ ಆಗಿದ್ದು, ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸವಾಗಿದ್ದು, ಸದರಿ ಜನರಿಗೆ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇದ್ದು, ವಾರ್ಡ್‌ನ ಪ್ರದೇಶಗಳಾದ ತಂಗಮಲ್ಲೆ ಗ್ರಾಮ, ವರಲಕ್ಷ್ಮಿನಗರ, ಬಂಗಾರಗಿರಿನಗರ, ಇಂದ್ರಪುರಂ, ಮುನಿನಾಗಪ್ಪ ಲೇಔಟ್ ಹಾಗೂ ಅಂದಾಜಿನಲ್ಲಿ ತಿಳಿಸಿರುವ ಪ್ರದೇಶಗಳಲ್ಲಿ ಕೆಳಕಂಡ ಕಮಗಾರಿಗಳನ್ನು 2012-13ನೇ ಸಾಲಿನ ಶೇಕಡ 22.75ರ ಅನುದಾನದಡಿಯಲ್ಲಿ ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲು ಅವಶ್ಯಕತೆ ಇರುವುದರಿಂದ ದಿನಾಂಕ 15.06.2012 ರಂದು ಮಾನ್ಯ ನಗರಸಭಾ ಸದಸ್ಯರು ಪತ್ರ ಮುಖೇನ ಕೋರಿರುತ್ತಾರೆ.

ಅದರಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತವೆ. ಆದ್ದರಿಂದ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಕೆಳಕಂಡ 08 ಕಾಮಗಾರಿಗಳಿಗೆ ▫.215.00 ಲಕ್ಷಗಳ ಅಂದಾಜು ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| Sl. No. | Name of Work | Amount (▫.In Lakhs) |
|---|---|---|
| 1 | Construction of Ambedkar Samudaya Bhavan at Subramanya Temple near Doddanna Nagar main road | 80.00 |
| 2 | Improvements to drain and roads at Doddanna Nagar | 20.00 |
| 3 | Construction of Library & Gym building | 50.00 |
| 4 | Improvements to Drain and roads at Banagargiri Layout | 20.00 |
| 5 | Improvements to balance drains and roads at Muninagappa layout | 20.00 |
| 6 | Providing Gym equipments to Ambedkar Bhavan at Bangargiri | 10.00 |
| 7 | Providing Gym equipments to Ambedkar Bhavan at Srinivasanagar | 10.00 |
| 8 | Providing Vivekananda statue | 5.00 |
| **Total** | | **215.00** |

ಮೇಲ್ಕಂಡ 08 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ▫.215.00 ಲಕ್ಷಗಳನ್ನು 2012-13ನೇ ಸಾಲಿನ ಶೇಕಡ 22.75ರ ಅನುದಾನದಡಿಯಲ್ಲಿ ಕೈಗೊಳ್ಳಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 23.07.2012ರ ಟಿಪ್ಪಣಿ ಒಪ್ಪುತ್ತಾ ಕಾಮಗಾರಿಗಳನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆಗೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 06. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 83/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:23.07.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ, **ಶ್ರೀ ಆರ್ ಶ್ರೇಯಸ್‌ರಾಜ್ ಬಿನ್ ಎಸ್.ರವೀಂದ್ರನಾಥ್, ನಂ: 25, 26ನೇ ಮೈನ್, 5ನೇ ಬ್ಲಾಕ್, ನಂದಿನಿಲೇಔಟ್, ಬೆಂಗಳೂರು-560 096** ಇಲ್ಲಿ ವಾಸವಿರುವ ಇವರು ಅರ್ಜಿ ಸಲ್ಲಿಸಿ ಕ್ಯಾಲಿಪೋರ್ನಿಯಾದಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಚಿಸಿರುವುದರಿಂದ ಯೂನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯಾದಲ್ಲಿ ಒಂದು ವರ್ಷದ Ph.D Biomedical Engineering ಪದವಿ ವ್ಯಾಸಂಗ ಮಾಡಲು ತಗಲುವ

ಶೈಕ್ಷಣಿಕ ವೆಚ್ಚ ₹.50,453 ಅಮೇರಿಕನ್ ಡಾಲರ್ಸ್ ವೆಚ್ಚವಾಗುತ್ತದೆಂದು ಸದರಿ ವೆಚ್ಚದ ಮೊತ್ತವನ್ನು ಪಾಲಿಕೆಯ ಕಲ್ಯಾಣ ಇಲಾಖೆ ವತಿಯಿಂದ ಭರಿಸಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಮಾರ್ಗಸೂಚಿಗಳನ್ವಯ ಕ್ರಮವಹಿಸಲು ಜಂಟಿ ಆಯುಕ್ತರು (ಕಲ್ಯಾಣ) ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಕ.ಅ./ಕೇಂ.ಕ/ಪಿ.ಆರ್/400/2011–12, ದಿನಾಂಕ: 31/03/2012ರಲ್ಲಿ ತಿಳಿಸಿರುವಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:31/3/2012ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ:ಸಾನ್ಯಾಸ್ಥಾಸ/362/2011–12ರಲ್ಲಿ 2011–12ನೇ ಸಾಲಿನ ಕಲ್ಯಾಣ ಕಾರ್ಯಕ್ರಮದಡಿ ವಾರ್ಡ್‌ವಾರು ಅನುದಾನವನ್ನು ಹಂಚಿಕೆ ಮಾಡಿ ಸದರಿ ಸಾಲಿನಲ್ಲಿ ವಿವಿಧ ವರ್ಗಗಳಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸುವ ಬಗ್ಗೆ ಸೂಚಿಸಿರುವ ಮೇರೆಗೆ 2011–12ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದ್ದು, ಇದರನ್ವಯ ಶೇ.22.75ರ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮಗಳು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಲೆಕ್ಕ ಶೀರ್ಷಿಕೆಯಲ್ಲಿ ₹.52.80 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಈ ಅನುದಾನದಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಿ ಮಾರ್ಗಸೂಚಿಗಳನ್ವಯ ಸಹಾಯಧನ ಬಿಡುಗಡೆ ಮಾಡಲು ಕ್ರಮ ವಹಿಸಬಹುದಾಗಿರುತ್ತದೆ. ಈ ಸಂಬಂಧ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳು ನೈಜವಾಗಿರುತ್ತೆಂದು ಹಾಗೂ ದಾಖಲೆಗಳಲ್ಲಿ ಸಲ್ಲಿಸಿರುವ ವಿಳಾಸದಲ್ಲಿ ವಾಸವಾಗಿರುವುದಾಗಿ ಮಹಾಲಕ್ಷ್ಮಿಪುರಂ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ರವರು ಸ್ಥಳ ಪರಿಶೀಲನೆ ನಡೆಸಿ ಪಂಚನಾಮ ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಸದರಿ ಸೌಲಭ್ಯವನ್ನು ಪಡೆಯಲು ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಅರ್ಜಿದಾರರು ಪರಿಶಿಷ್ಟ ಜಾತಿ, ಭೋವಿ ಉಪ ಜಾತಿಗೆ ಸೇರಿದವರಾಗಿದ್ದು, ಯೂನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯಾ, ಐರ್‌ವಿನೆ ಇಲ್ಲಿ ಒಂದು ವರ್ಷದ Ph.D Biomedical Engineering ಪದವಿಗೆ ಪ್ರವೇಶ ಪಡೆಯಲು Offer Letter ಕಳುಹಿಸಿದ್ದು, ಇದರನ್ವಯ ಅರ್ಜಿದಾರರು ಸದರಿ ಪದವಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಬಗ್ಗೆ ತಿಳಿದು ಬಂದಿರುತ್ತದೆ.

ಆದೇ ರೀತಿ ಸಹಾಯಧನ ಪಡೆಯಲು ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಎಲ್ಲಾ ದಾಖಲಾತಿಗಳೊಂದಿಗೆ ಅರ್ಜಿದಾರರಿಂದ ಸದರಿ ವ್ಯಾಸಂಗವನ್ನು ಪೂರ್ಣಗೊಳಿಸುವುದಾಗಿ, ಒಂದು ಪಕ್ಷ ವ್ಯಾಸಂಗವನ್ನು ಅಪೂರ್ಣಗೊಳಿಸಿದ್ದಲ್ಲಿ, ಪಾಲಿಕೆಯಿಂದ ಭರಿಸಲಾಗಿರುವ ಸಹಾಯಧನ ಮೊತ್ತವನ್ನು ಹಿಂದಿರುಗಿಸುತ್ತೇನೆಂದು ₹.20/–ರ ಛಾಪಾ ಕಾಗದದಲ್ಲಿ ಸಾಕ್ಷಿದಾರರ ಸಹಿಯೊಂದಿಗೆ ಪಡೆದಿರುವ ಪ್ರಮಾಣ ಪತ್ರ ಹಾಗೂ ಈ ಸಂಬಂಧ ಸರ್ಕಾರಿ ನೌಕರರಿಂದ ಸಾಕ್ಷಿದಾರರ ಸಹಿಯೊಂದಿಗೆ ಪಡೆದಿರುವ ಶಪಥ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಪಾಲಿಕೆಯ ಮಾರ್ಗಸೂಚಿಯಲ್ಲಿ ನಿರ್ದೇಶನವಿದ್ದು, ಈ ಸಂಬಂಧವಾಗಿ ಸಮಾಜ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ವಿಶ್ವವಿದ್ಯಾಲಯವು ನಿಗಧಿಪಡಿಸುವ ಪ್ರವೇಶ ಶುಲ್ಕ, ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ವಸತಿ ವೆಚ್ಚ ಮತ್ತು ಇತರೆ ಶುಲ್ಕಗಳ ಪೈಕಿ ಯಾವ–ಯಾವ ಶುಲ್ಕಗಳನ್ನು ಮರುಪಾವತಿ ಮಾಡಬಹುದು ಮತ್ತು ಒಂದು ವರ್ಷ ಅವಧಿಯ Ph.D Biomedical Engineering ಪದವಿ ವ್ಯಾಸಂಗಕ್ಕೆ ಗರಿಷ್ಟ ಎಷ್ಟು ಸಹಾಯ ಧನವನ್ನು ಮಂಜೂರು ಮಾಡಬಹುದು ಎಂಬುವುದರ ಬಗ್ಗೆ ಹಾಗೂ ಸದರಿ ಅಭ್ಯರ್ಥಿಯು ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯಿಂದ ಮೇಲ್ಕಂಡ ಸೌಲಭ್ಯವನ್ನು ಪಡೆದಿರುವವರೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಅಭಿಪ್ರಾಯ ವರದಿಯೊಂದಿಗೆ ಪ್ರಸ್ತಾಪಿತ ಕಾರ್ಯಕ್ರಮದ ಬಗ್ಗೆ ಹೊರಡಿಸಿರುವ ಮಾರ್ಗಸೂಚಿ ಮತ್ತು ಸುತ್ತೋಲೆ ಆದೇಶಗಳ ಪ್ರತಿಗಳನ್ನು ಈ ಕಛೇರಿಗೆ ಒದಗಿಸಲು ಕೋರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ರವರಿಗೆ ದಿನಾಂಕ: 09–12–2011 ರಂದು ಪತ್ರ ಬರೆಯಲಾಗಿದ್ದು, ಇದಕ್ಕೆ ಸದರಿ ಇಲಾಖೆಯಿಂದ ಬಂದಿರುವ ಪ್ರತ್ಯುತ್ತರ ಈ ಕೆಳಕಂಡಂತೆ ಇರುತ್ತದೆ.

ಶ್ರೀ ಆರ್ ಶ್ರೇಯಸ್‌ರಾಜ್ ಬಿನ್ ಎಸ್.ರವೀಂದ್ರನಾಥ್ ರವರು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಇದುವರೆಗೂ ಧನಸಹಾಯ ಪಡೆದಿರುವುದಿಲ್ಲವೆಂದು ಹಾಗೂ ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ

ಮಾಡಲು ಧನ ಸಹಾಯ ಮಂಜೂರಾತಿ ಕುರಿತು ಹೊರಡಿಸಿರುವ ಪರಿಷ್ಕೃತ ಸರ್ಕಾರಿ ಆದೇಶದನ್ವಯ ವಿದ್ಯಾರ್ಥಿಗೆ ವಾರ್ಷಿಕ ಗರಿಷ್ಠ ¤.6.00 ಲಕ್ಷಗಳ ನಿರ್ವಹಣಾ ವೆಚ್ಚ ಹಾಗೂ ವಿಶ್ವವಿದ್ಯಾಲಯವು ನಿಗಧಿಪಡಿಸಿದ ಬೋಧನಾ ಶುಲ್ಕ ಪಾವತಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು(ಶಿಕ್ಷಣ) ರವರು ದಿನಾಂಕ: 19.01.2012 ರಂದು ಜಂಟಿ ಆಯುಕ್ತರು(ಪಶ್ಚಿಮ) ರವರಿಗೆ ಪತ್ರ ವಿಳಾಸ ಮಾಡಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಆಧಾರ ಅರ್ಜಿದಾರರಾದ ಶ್ರೀ ಆರ್ ಶ್ರೇಯಸ್‌ರಾಜ್ ಬಿನ್ ಎಸ್.ರವೀಂದ್ರನಾಥ್, ರವರು ಯೂನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯಾದಲ್ಲಿ ಒಂದು ವರ್ಷದ Ph.D Biomedical Engineering ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಇವರಿಗೆ ಪಾಲಿಕೆಯಿಂದ ಸಹಾಯಧನ ಮಂಜೂರು ಮಾಡುವ ಬಗ್ಗೆ ದಿನಾಂಕ: 10/05/2012ರಂದು ನಡೆದ ವಲಯ ಮಟ್ಟದ ಆಯ್ಕೆ ಸಮಿತಿಯ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಸಮ್ಮುಖದಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, 2011-12ನೇ ಸಾಲಿನ ಪಶ್ಚಿಮ ವಲಯ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶೈಕ್ಷಣಿಕ ಕಾರ್ಯಕ್ರಮದ ಅಡಿಯಲ್ಲಿ **ಶ್ರೀ ಆರ್ ಶ್ರೇಯಸ್‌ರಾಜ್ ಬಿನ್ ಎಸ್.ರವೀಂದ್ರನಾಥ್, ನಂ: 25, 26ನೇ ಮೈನ್, 5ನೇ ಬ್ಲಾಕ್, ನಂದಿನಿಲೇಔಟ್, ಬೆಂಗಳೂರು-560 096**. ಇವರು ಯು.ಎಸ್.ಎ ರಾಷ್ಟ್ರದ ಯೂನಿವರ್ಸಿಟಿ ಆಫ್ ಕ್ಯಾಲಿಪೋರ್ನಿಯಾ, ಐರ್‌ವಿನೆ ಕಾಲೇಜಿನಲ್ಲಿ ಒಂದು ವರ್ಷ ಅವಧಿಯ Ph.D Biomedical Engineering ಪದವಿ ವ್ಯಾಸಂಗಕ್ಕೆ ತಗಲುವ ವೆಚ್ಚ $53,436ಗಳು ಭಾರತೀಯ ಹಣ ಇಂದಿನ ದರ 53X53,436=28,32,108.00ಗಳಲ್ಲಿ

ಸರ್ಕಾರಿ ಆದೇಶ ಸಂಖ್ಯೆ: ಸಕಇ 132 ಪಕವಿ 2011, ಬೆಂಗಳೂರು ದಿನಾಂಕ: 06-09-2011ರ ಪರಿಷ್ಕೃತ ಮಾರ್ಗಸೂಚಿಗಳನ್ವಯ ನಿರ್ವಹಣಾ ವೆಚ್ಚ ವಾರ್ಷಿಕ ಗರಿಷ್ಠ ¤.6.00 ಲಕ್ಷ, ವಿಶ್ವವಿದ್ಯಾಲಯವು ನಿಗಧಿಪಡಿಸುವ ಭೋಧನಾ ಶುಲ್ಕ ಹಾಗೂ ಸಾಧೀಲ್ವಾರು ವೆಚ್ಚ ವಾರ್ಷಿಕ ¤.75,000/-ಗಳನ್ನು ಪಾವತಿಸಬೇಕಾಗಿರುತ್ತದೆ.

ಆದರೇ ಸದರಿ ಅಭ್ಯರ್ಥಿಗೆ 9 ತಿಂಗಳ ರವರೆಗೆ $15,382 ಶಿಷ್ಯ ವೇತನ ಹಾಗೂ ಸಲಹೆಗಾರರಾಗಿ ಶಿಬಿರಕ್ಕೆ ಹಾಜರಾಗಲು $5,127ಗಳ ಸಂಭಾವನೆಯು ವಿಶ್ವವಿದ್ಯಾಲಯವು ನೀಡುವುದರಿಂದ ಸರ್ಕಾರಿ ಮಾರ್ಗಸೂಚಿಗಳ ಪ್ರಕಾರ ನಿರ್ವಹಣಾ ವೆಚ್ಚವನ್ನು ಮಂಜೂರು ಮಾಡುವುದನ್ನು ಹೊರತುಪಡಿಸಿ ಉಳಿದಂತೆ ವಿಶ್ವವಿದ್ಯಾಲಯವು ನಿಗಧಿಪಡಿಸಿರುವ ಭೋಧನಾ ಶುಲ್ಕ $29,944ಗಳು ಭಾರತೀಯ ಹಣ ಇಂದಿನ ದರ 53X29,944=15,87,032.00ಗಳ ಸಹಾಯಧನವನ್ನು 2011-12ನೇ ಸಾಲಿನ ಆಯ-ವ್ಯಯ ಲೆಕ್ಕ ಶೀರ್ಷಿಕೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶೈಕ್ಷಣಿಕ ಕಲ್ಯಾಣ ಕಾರ್ಯಕ್ರಮ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಉಪ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ¤.52.80 ಲಕ್ಷಗಳ ಅನುದಾನದಲ್ಲಿ ಮಂಜೂರು ಮಾಡಿ, ಈಗಾಗಲೇ ಶಿಕ್ಷಣ ಶುಲ್ಕಗಳನ್ನು ಪಾವತಿಸಿರುವ ಅರ್ಜಿದಾರರ ತಂದೆಯವರಾದ ಶ್ರೀ ಎಸ್.ರವೀಂದ್ರನಾಥ್ ರವರಿಗೆ ಚೆಕ್ ಮೂಲಕ ಪಾವತಿಸಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 23.07.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 07. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 84/12-13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:23.07.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ 72ರ ಹೆರೋಹಳ್ಳಿ ವ್ಯಾಪ್ತಿಯ ಗಿಡದಕೊನೆನಹಳ್ಳಿ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ವಾರ್ಡ್‌ನ ಮಾನ್ಯ ಸದಸ್ಯರು ಮನವಿ ಮಾಡಿದ್ದು, ಅದರಂತೆ ಕಾಮಗಾರಿಯ ಅಜಿದಾಜು ಮೊತ್ತ ¤.150.00 ಲಕ್ಷಗಳಿಗೆ ಪಿ1878 ಲೆಕ್ಕಶೀರ್ಷಿಕೆ ಅನುದಾನದಡಿಯಲ್ಲಿ 072-12-000137 ರಂತೆ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಉಲ್ಲೇಖ (1)ರ ಆದೇಶದಂತೆ ಸದರಿ ಕಾಮಗಾರಿಯ ಅಜಿದಾಜು ಮೊತ್ತ ರೂ.150.00 ಲಕ್ಷಗಳಿಗೆ 2011–12 ನೇ ಸಾಲಿನ ಆಯವ್ಯಯದ ಪ–1878–18% ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 23.07.2012ರ ಟಿಪ್ಪಣಿಯನ್ನು ಒಪ್ಪುತ್ತಾ ಕಾಮಗಾರಿಗಳನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 08. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 85/12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:01.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ JNNURM-BSUP, BBMP 1ನೇ ಹಚಿತ, 1ನೇ ಪ್ಯಾಕೇಜ್ ಯೋಜನೆಯಡಿ ವಿವಿಧ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ವಸತಿ ಗೃಹಗಳನ್ನು ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ದಿನಾಂಕ 01.03.2010 ರಂದು ನಡೆದ 15ನೇ SLEC ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ 9 ಕೊಳಚೆ ಪ್ರದೇಶಗಳನ್ನು ದಿನಾಂಕ 31.03.2010ರಂದು ಕರ್ನಾಟಕ ಕೊಳಗೇರಿ ಅಭಿವೃದ್ದಿ ಮಂಡಳಿರವರಿಗೆ ಹಸ್ತಾಂತರಿಸಲಾಗಿರುತ್ತದೆ. ಸದರಿ 9 ಕೊಳಚೆ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪರಿಷ್ಕೃತ ಯೋಜನೆಯನ್ನು ರೂ.52.86 ಕೋಟಿಗಳಿಗೆ ತಯಾರಿಸಿ 19ನೇ SLEC ಮತ್ತು ದಿನಾಂಕ 30.08.2011 ರಂದು ನಡೆದ 115ನೇ CSMC ಸಭೆಯಲ್ಲಿ ಅನುಮೋದನೆ ಪಡೆದುಕೊಂಡ ಪರಿಷ್ಕೃತ ಯೋಜನೆ ವರದಿಯಲ್ಲಿ ತಾತ್ಕಾಲಿಕ ವಸತಿ ಸೌಲಭ್ಯ ಒದಗಿಸುವ (Transits sheds) ವೆಚ್ಚಗಳು ಸೇರ್ಪಡೆಗೊಂಡಿಲ್ಲವೆಂದು ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ. ಹಾಗೂ ಹಾಲಿ ಇರುವ ಕಚ್ಚಾಮನೆಗಳನ್ನು ಒಡೆದುಹಾಕಿ ತಾತ್ಕಾಲಿಕ ಮನೆಗಳನ್ನು ಕಟ್ಟಲು ಈ ಕೆಳಕಂಡಂತೆ ವಿವರಗಳನ್ನು ನೀಡಿರುತ್ತಾರೆ.

| ABSTRACT | | | | | | | |
|---|---|---|---|---|---|---|---|
| | | | | | | (Estimated Cost ರೂ. In lakhs) | |
| Sl. No | Name of the Work | No.of Du`s | Type of Constr. | No.of Transit sheds | Transit sheds | Toilets & Bath | Total |
| 1 | Arasu Colony Slum, Jayanagara, ward No.170 | 288 | G+3 | 288 | 32.40 | 4.20 | 36.60 |
| 2 | RK Mutt Slum, Jayangara Ward No.142 | 120 | G+3 | 120 | 13.50 | 1.73 | 15.23 |
| 3 | Mariyamma Slum, Jayangara Ward No.178 | 48 | G+3 | 48 | 6.12 | 2.10 | 8.22 |
| 4 | Indiragandhi Slum, Jayangara Ward No.170 | 84 | GF | 84 | 10.71 | 2.10 | 12.81 |
| 5 | Vyalikaval-Dobighat Slum, Malleshwaram, Ward No.65 | 176 | G+3 | 30 | 3.83 | 0 | 3.83 |
| 6 | Tungabhadra Slum, Vasanthapura, Ward No.170 | 44 | G+3 | 44 | 5.24 | 1.73 | 6.97 |
| 7 | Brundavan nagar – Dobighat Slum, Hanumantanagara, Ward No.170 | 112 | G+3 | 48 | 5.40 | 1.73 | 7.13 |

| | | | | | | | |
|---|---|---|---|---|---|---|---|
| 8 | AD Halli Slum, Ward No.105 | 144 | G+3 | 68 | 8.67 | 2.06 | 10.73 |
| 9 | Kavika Slum, Ward No.170 | 128 | G+3 | 0 | 0 | 0 | 0 |
| 10 | Gangondanahalli Slum, Ward No.131 | 96 | G+3 | 96 | 12.24 | 2.06 | 14.30 |
| **Total** | | **1240** | | **826** | **98.11** | **17.71** | **115.82** |

ಸದರಿ ಕೊಳಚೆ ಪ್ರದೇಶಗಳಲ್ಲಿ ಕಾಮಗಾರಿ ಪ್ರಾರಂಭಿಸಲು ಹಾಲಿ ಇರುವ ಕಚ್ಚಾ ಮನೆಗಳನ್ನು ಒಡೆದುಹಾಕಿ ಅಲ್ಲಿನ 826 ನಿವಾಸಿಗಳಿಗೆ ಉದ್ದೇಶಿತ ಕಟ್ಟಡಗಳ ನಿರ್ಮಾಣ ಕಾಮಗಾರಿಯು ಪೂರ್ಣಗೊಳಿಸುವವರೆಗೂ ಮೂಲಭೂತ ಸೌಕರ್ಯ ವ್ಯವಸ್ಥೆ ಸೇರಿದಂತೆ, ತಾತ್ಕಾಲಿಕ ವಸತಿಗೃಹಗಳನ್ನು (Transits sheds) ಒಟ್ಟು ▫.115.82 ಲಕ್ಷಗಳ ಅಂದಾಜುಪಟ್ಟಿ ತಯಾರಿಸಿದ್ದು, ಸದರಿ ಮೊತ್ತವನ್ನು ಕರ್ನಾಟಕ ಕೊಳಗೆರೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೇಲ್ಕಂಡ ಪಟ್ಟಿಯಲ್ಲಿ ವಿವರಿಸಿರುವಂತೆ ಒಟ್ಟು 826 ತಾತ್ಕಾಲಿಕ ವಸತಿ ಗೃಹಗಳಿಗೆ ತಗಲುವ ಅಂದಾಜು ವೆಚ್ಚ ▫.115.82 ಲಕ್ಷಗಳ ಹಣ ಬಿಡುಗಡೆ ಮಾಡುವ ಸಂಬಂಧ ಮುಖ್ಯ ಹಣಕಾಸು ಅಧಿಕಾರಿಯವರ ಅಭಿಪ್ರಾಯ ಕೋರಲಾಗಿ, ಸದರಿಯವರು ಈ ಮೊತ್ತವನ್ನು JNNURM ಯೋಜನೆಯಡಿ ನೀಡಲು ಬರುವುದಿಲ್ಲವೆಂದು ಸದರಿ ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆಗಳಿಗೆ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಅದುದರಿಂದ ತಾತ್ಕಾಲಿಕ ವಸತಿ ಸೌಲಭ್ಯ ಒದಗಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅನುದಾನದಡಿಯಲ್ಲಿ ಸದರಿ ಮೊತ್ತವನ್ನು ಭರಿಸುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

–ಮುಂದೂಡಿದೆ–

## 09. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 86/12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:01.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ರೀತ್ಯಾ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಪತ್ರ ಬರೆದು ಶಾಂತಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲಕ್ಷ್ಮಣ್‌ರಾವ್ ನಗರ ಕೊಳಚೆ ಪ್ರದೇಶದ ಫಲಾನುಭವಿಗಳ ವಂತಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶೇಕಡ 22.75 ಕಲ್ಯಾಣ ಯೋಜನೆಗಳ ನಿಧಿಯಲ್ಲಿ ಭರಿಸಲು ಕೋರಿರುತ್ತಾರೆ.

ಪತ್ರದಲ್ಲಿ ಉಲ್ಲೇಖಿಸಿರುವಂತೆ ಒಟ್ಟು ಫಲಾನುಭವಿಗಳ ಸಂಖ್ಯೆ 920 ಆಗಿದ್ದು, ಅದರಲ್ಲಿ 575 ಫಲಾನುಭವಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆಂದು, ತಲಾ ▫.21,700/– ಗಳಂತೆ ಒಟ್ಟು 575 ಫಲಾನುಭವಿಗಳ ವಂತಿಕೆಯಾದ ▫.1,24,77,500/– (▫.ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷದ ಎಪ್ಪತ್ತೇಳು ಸಾವಿರದ ಐದುನೂರು) ಗಳನ್ನು ಪಾಲಿಕೆಯ 2012–13ನೇ ಆರ್ಥಿಕ ವರ್ಷದ ಶೇಕಡ 22.75ರ ಅನುದಾನದಡಿಯಲ್ಲಿ ಲೆಕ್ಕ ಶೀರ್ಷಿಕೆ 2020ರಡಿಯಲ್ಲಿ ಲಭ್ಯವಿರುವ ▫.2000 ಲಕ್ಷ ಅನುದಾನದಲ್ಲಿ ಭರಿಸಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

–ಮುಂದೂಡಿದೆ–

## 10. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 87/12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:03.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗೋವಿಂದರಾಜನಗರ ವಿಭಾಗದ ವಾರ್ಡ್ ಸಂಖ್ಯೆ 105ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳಾದ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ರಸ್ತೆ ಚರಂಡಿ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳುವಂತೆ ಮಾನ್ಯ ಪಾಲಿಕೆ ಸದಸ್ಯರು ಕೋರಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ರವರು ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳನ್ನು ಈ ಕೆಳಕಂಡಂತೆ ತಯಾರಿಸಿ ಸಲ್ಲಿಸಿರುತ್ತಾರೆ.

| Sl. No. | Ward No. | Name of Work | Est Cost in Lakhs |
|---|---|---|---|
| 1 | 105 | Providing RCC drain near Gangamma house in BRI colony | 9.95 |
| 2 | 105 | Providing RCC drain to 17th cross road near Slum Board Houses of BRI colony | 9.95 |
| 3 | 105 | Providing RCC drain to 7th main road near Slum Board Houses of BRI colony | 9.95 |
| 4 | 105 | Providing RCC drain to 17th A cross road in BRI colony | 19.95 |
| 5 | 105 | Providing RCC drain to 4th main road near MVM school in BRI colony | 9.95 |
| 6 | 105 | Providing RCC drain to 17th B cross of BRI colony | 19.95 |
| 7 | 105 | Providing RCC drain in adjacent Gulbaraga Slum road of BRI colony | 19.95 |
| **Total** | | | **99.65** |

ಸದರಿ ಕಾಮಗಾರಿಗಳ ಪ್ರದೇಶಗಳಲ್ಲಿ ಹೆಚಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿದ್ದು ಮೂಲಭೂತ ಸೌಕರ್ಯಗಳಾದ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಒದಗಿಸಬೇಕಾಗಿರುವುದರಿಂದ ಮೇಲಿನ ಕಾಮಗಾರಿಗಳಿಗೆ 2012–13ನೇ ಅಯವ್ಯಯದ ಶೇಕಡ 22.75 ರ ಅನುದಾನದಡಿಯಲ್ಲಿ ಸೇರಿಸಿಕೊಂಡು ಆಡಳಿತಾತ್ಮಕ ಅನುಮೋದನೆಗಾಗಿ ಮತ್ತು ಜಾಬ್ ನಂಬರ್ ನೀಡಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 03.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು

## 11. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 88/12–13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 03.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.70 ರಾಜಗೋಪಾಲನಗರವು ರೆವಿನ್ಯೂ ಬಡಾವಣೆಯಾಗಿದ್ದು, ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುತ್ತಾರೆ. ವಾರ್ಡ್ ನಂ.70 ರಾಜಗೋಪಾಲನಗರವು ಈ ಹಿಂದೆ ಇದ್ದ ನಗರ ಸಭೆಯಿಂದ ಹೊಸದಾಗಿ ದಾಸರಹಳ್ಳಿ ವಲಯದ ವ್ಯಾಪ್ತಿಗೆ ಸೇರಿಸಲ್ಪಟ್ಟಿದ್ದು, ಹಿಂದುಳಿದ ಪ್ರದೇಶವಾದ ಈ ವಾರ್ಡ್‌ನ ವಿವಿಧ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿದ್ದು ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳು ಸರಿಯಿಲ್ಲದ್ದರಿಂದ, ಚರಂಡಿಯ ನೀರು ರಸ್ತೆಗಳ ಮೇಲೆ ಹರಿಯುತ್ತಿರುವ ಕಾರಣ ತುರ್ತಾಗಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಮಗಾರಿಗಳನ್ನು ಅತಿ ಅವಶ್ಯಕವಾಗಿ ಆಗಬೇಕಾಗಿದ್ದು, ಪರಿಶಿಷ್ಟ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಈ ಪ್ರದೇಶದಲ್ಲಿ ಶೇಕಡ 22.75ರ ಯೋಜನೆಯಡಿಯಲ್ಲಿ ಪ್ರಸ್ಥಾಪಿಸಿರುವ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ವಾರ್ಡ್ ನಂ.70ರ ಸದಸ್ಯರು ವಿನಂತಿಸಿರುತ್ತಾರೆ.

ಆದುದರಿಂದ ಪರಿಶೀಲಿಸಲಾಗಿ ರಾಜಗೋಪಾಲನಗರ ವಾರ್ಡ್‌ನಲ್ಲಿ ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರು ವಾಸಿಸುತ್ತಿದ್ದು ಹಿಂದುಳಿದ ಪ್ರದೇಶವಾದ ಈ ವಾರ್ಡ್‌ನ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿದ್ದು ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳು ಸರಿಯಿಲ್ಲದ್ದರಿಂದ, ಚರಂಡಿಯ ನೀರು ರಸ್ತೆಗಳ ಮೇಲೆ ಹರಿಯುತ್ತಿರುವ ಕಾರಣ ತುರ್ತಾಗಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಈ ಸಂಬಂಧ ದಿನಾಂಕ 15.02.2012ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು – ವಿಷಯದ ಸಂಖ್ಯೆ ಸಾ.ನ್ಯಾ.ಸ್ಥಾ.ಸ: 308/11–12 ರಲ್ಲಿ ಭಾಗ 2ರಲ್ಲಿನ ಅನುಬಂಧ–2ರಲ್ಲಿ ಕ್ರಮ ಸಂಖ್ಯೆ 6 ರಲ್ಲಿ ವಾರ್ಡ್ ಸಂಖ್ಯೆ 70ಕ್ಕೆ ▫.260.20 ಲಕ್ಷಗಳಿಗೆ ಸಿವಿಲ್ ಕಾಮಗಾರಿಯನ್ನು (ಪುಟ 14ರಲ್ಲಿ) ರ ರೀತ್ಯಾ ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಜಾಬ್ ಸಂಖ್ಯೆ ನೀಡುವುದೆಂದು ನಿರ್ಣಯಿಸಿರುತ್ತಾರೆ. ಅದರಂತೆ ವಾರ್ಡ್ ಸಂಖ್ಯೆ 70ರ ಮಾನ್ಯ ಸದಸ್ಯರೊಂದಿಗೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಪ್ರದೇಶದಲ್ಲಿ ಸ್ಥಳ ತಪಾಸಣೆಯನ್ನು ಮಾಡಿ ಆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳ ಹಿತದೃಷ್ಟಿಯನ್ನು ಗಮನದಲ್ಲಿ ಇರಿಸಿಕೊಂಡು ಈ ಕೆಳಕಂಡ ವಿವಿಧ 14 ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯನ್ನು ಶೇಕಡ 22.75ರ ಯೋಜನೆಯಡಿಯಲ್ಲಿ ಒಟ್ಟು ▫.260.20 ಲಕ್ಷಗಳಿಗೆ ತಯಾರಿಸಲಾಗಿದೆ. ಈ ಸಂಬಂಧ ಕ್ರಿಯಾ ಯೋಜನೆಯ ಪಟ್ಟಿಯನ್ನು ಈ ಕಡತದಲ್ಲಿ ಅಡಕವಿರಿಸಿದೆ.

| Sl. No. | Name of the Work | Amount (▫.in lakhs) |
|---|---|---|
| 1 | Construction of Deck and RCC drain near Duggalamma temple Basappanakatte | 19.96 |
| 2 | Construction of RCC Concrete drain at 11th cross road (right side) from Rajago[alanagara main road | 19.95 |
| 3 | Construction of RCC concrete drain at 10th A cross (left side and right side) | 19.90 |
| 4 | Construction of Concrete drain at 10th B cross (right side) | 13.00 |
| 5 | Construction of Concrete drain at 10th C cross (left side) | 19.95 |
| 6 | Construction of Concrete drain at 10th cross road upto Vinayaka temple | 19.50 |
| 7 | Construction of Concrete drain at 10th E cross (left side) | 19.90 |
| 8 | Construction of Concrete drain at 10th F cross (left side) | 19.95 |
| 9 | Construction of Concrete drain at 10th G cross left side (Church road) | 19.85 |
| 10 | Construction of Concrete drain near DM public school, Rajeshwarinagara | 19.90 |
| 11 | Construction of Concrete drain near Anganvadi road and cross roads of Basappankatte | 19.60 |
| 12 | Construction of Concrete drain near Balamuri Ganesha temple, Rajagopalanagara | 19.80 |
| 13 | Construction of RCC drain from Basappanakatte to Kasturinagara main road | 19.65 |
| 14 | Construction of Concrete drain at Sampige road, Basappanakatte | 9.29 |
| | **Total** | **260.20** |

ವಾರ್ಡ್ ನಂ.70ರ ಕಾರ್ಯವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಪ್ರದೇಶದಲ್ಲಿ ಮೇಲ್ಕಂಡಂತೆ, ಶೇಕಡ 22.75 ಯೋಜನೆಯಡಿಯಲ್ಲಿ ಪ್ರಸ್ತಾಪಿಸಲಾಗಿರುವ ಒಟ್ಟು 14 ವಿವಿಧ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅತಿ ಅವಶ್ಯಕ ಮತ್ತು ಜರೂರಾಗಿ ಮಳೆಗಾಲ ಬರುವ ಮುನ್ನ ನಿರ್ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ತಯಾರಿಸಲಾಗಿರುವ ಕ್ರಿಯಾ ಯೋಜನಾಪಟ್ಟಿಗೆ 2012–13ನೇ ಸಾಲಿನ ಆಯವ್ಯಯದಲ್ಲಿ ಜಾಬ್‌ಕೋಡ್ ನೀಡಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 03.08.2012ರ ಟಿಪ್ಪಣಿಯನ್ನು ಒಪ್ಪುತ್ತಾ ಕಾಮಗಾರಿಗಳನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಅರ್.ಐ.ಡಿ.ಎಲ್.ಸಂಸ್ಥೆಗೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 12. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 89/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:03.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 71 ಹೆಗ್ಗನಹಳ್ಳಿ ರೆವೆನ್ಯೂ ಬಡಾವಣೆಯಾಗಿದ್ದು, ಮಾರುತಿನಗರ, ಮಯೂರನಗರ, ಫ್ರೇಂಡ್ಸ್ ಕಾಲೋನಿ ಮತ್ತು ಶಿವಾನಂದನಗರಗಳಲ್ಲಿ ಹೆಚ್ಚಾಗಿ ಪರಿಶಿಷ್ಠ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುತ್ತಾರೆ. ವಾರ್ಡ್ ನಂ.71 ಹೆಗ್ಗನಹಳ್ಳಿಯು ಈ ಹಿಂದೆ ಇದ್ದ ನಗರ ಸಭೆಯಿಂದ ಹೊಸದಾಗಿ ದಾಸರಹಳ್ಳಿ ವಲಯದ ವ್ಯಾಪ್ತಿಗೆ ಸೇರಿಸಲ್ಪಟ್ಟಿದ್ದು, ಹಿಂದುಳಿದ ಪ್ರದೇಶವಾದ ಈ ವಾರ್ಡ್‌ನ ವಿವಿಧ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿದ್ದು ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳು ಸರಿಯಿಲ್ಲದ್ದರಿಂದ, ಚರಂಡಿಯ ನೀರು ರಸ್ತೆಗಳ ಮೇಲೆ ಹರಿಯುತ್ತಿರುವ ಕಾರಣ ತುರ್ತಾಗಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅತಿ ಅವಶ್ಯಕವಾಗಿ ಆಗಬೇಕಾಗಿದ್ದು, ಪರಿಶಿಷ್ಠ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಈ ಪ್ರದೇಶದಲ್ಲಿ ಶೇ. 22.75% ಯೋಜನೆಯಡಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ತರ್ತಾಗಿ ನಿರ್ವಹಿಸಬೇಕಾಗಿರುವುದರಿಂದ, ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ವಾರ್ಡ್ ಸಂಖ್ಯೆ 71ರ ಸದಸ್ಯರು ವಿನಂತಿಸಿರುತ್ತಾರೆ.

ಆದುದರಿಂದ ಪರಿಶೀಲಿಸಲಾಗಿ ಹೆಗ್ಗನಹಳ್ಳಿ ವಾರ್ಡ್‌ನಲ್ಲಿ ಮಾರುತಿನಗರ, ಮಯೂರನಗರ, ಫ್ರೇಂಡ್ಸ್ ಕಾಲೋನಿಗಳಲ್ಲಿ ಹೆಚ್ಚಾಗಿ ಪರಿಶಿಷ್ಠ ಜಾತಿ ಮತ್ತು ಜನಾಂಗದವರು ವಾಸಿಸುತ್ತಿದ್ದು, ಹಿಂದುಳಿದ ಪ್ರದೇಶವಾದ ಈ ವಾರ್ಡ್‌ನ ಬಡಾವಣೆಗಳಲ್ಲಿ ರಸ್ತೆಗಳು ಹಾಳಾಗಿದ್ದು ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳು ಸರಿಯಿಲ್ಲದ್ದರಿಂದ, ಚರಂಡಿಯ ನೀರು ರಸ್ತೆಗಳ ಮೇಲೆ ಹರಿಯುತ್ತಿರುವ ಕಾರಣ ತುರ್ತಾಗಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಈ ಸಂಬಂಧ ದಿನಾಂಕ 15.02.2012 ರಂದು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು – ವಿಷಯದ ಸಂಖ್ಯೆ: ಸಾನ್ಯಾಸ್ಥಾಸ 308 / 11-12 ರಲ್ಲಿ ಭಾಗ 2ರಲ್ಲಿನ ಅನುಬಂಧ–2ರಲ್ಲಿ ಕ್ರಮ ಸಂಖ್ಯೆ 7 ರಲ್ಲಿ ವಾರ್ಡ್ ಸಂಖ್ಯೆ 71ಕ್ಕೆ ᵒ.228.10 ಲಕ್ಷಗಳಿಗೆ ಸಿವಿಲ್ ಕಾಮಗಾರಿಗಳನ್ನು (ಪುಟ 14ರಲ್ಲಿ) ರ ರೀತ್ಯಾ. ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಜಾಬ್ ಸಂಖ್ಯೆ ನೀಡುವುದೆಂದು ನಿರ್ಣಯಿಸಿರುತ್ತಾರೆ ಅದರಂತೆ ವಾರ್ಡ್ ಸಂಖ್ಯೆ 71ರ ಮಾನ್ಯ ಸದಸ್ಯರೊಂದಿಗೆ ಪರಿಶಿಷ್ಠ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಪ್ರದೇಶದಲ್ಲಿ. ಸ್ಥಳ ತಪಸಣೆಯನ್ನು ಮಾಡಿ ಆ ಪ್ರದೇಶಗಳ ವಾಸಿಸುತ್ತಿರುವ ನಿವಾಸಿಗಳ ಹಿತದೃಷ್ಠಿಯನ್ನು ಗಮನದಲ್ಲಿ ಇರಿಸಿಕೊಂಡು ಈ ಕೆಳಕಂಡ ವಿವಿಧ 13 ಕಾಮಗಾರಿಗಳ ಕ್ರಿಯಾ ಯೋಜನೆಯ ಪಟ್ಟಿಯನ್ನು ಶೇ. 22.75% ಯೋಜನೆಯಡಿಯಲ್ಲಿ ಒಟ್ಟು ᵒ.228.10 ಲಕ್ಷಗಳಿಗೆ ತಯಾರಿಸಲಾಗಿದೆ. ಈ ಸಂಬಂಧ ಕ್ರಿಯಾ ಯೋಜನೆಯ ಪಟ್ಟಿಯನ್ನು ಈ ಕಡತದಲ್ಲಿ ಅಡಕವಿರಿಸಿದೆ.

| Sl. No. | Name of the Work | Amount (ᵒ. in lakhs) |
|---|---|---|
| 1 | Construction of drain and footpath on left side of 5th cross road, hegganahalli-friends colony in ward no. 71 | 18.70 |
| 2 | Construction of road and drain on right side of 5th cross road, hegganahalli-friends colony in ward no. 71 | 19.50 |
| 3 | Construction of road and drain on 6th cross road and balance length of 5th cross road, hegganahalli-friends colony in ward no. 71 | 19.50 |
| 4 | Construction of road and drain on 7th E and 7th F cross road of hegganahalli-friends colony in ward no. 71 | 18.35 |
| 5 | Construction of road and drain on 5th and 5th B cross road of hegganahalli-friends colony in ward no. 71 | 8.70 |

| Sl. No. | Name of the Work | Amount (□. in lakhs) |
|---|---|---|
| 6 | Construction of drain on Maruthinagar - Andrahalli main road from 11th cross road upto 15th cross road in ward no. 71 | 19.90 |
| 7 | Construction of concrete drain on 13th and 14th C cross road of Mayurnagara in ward no. 71 | 19.30 |
| 8 | Construction of road and drain on 12th and 13th cross road of Mayurnagara in ward no. 71 | 17.45 |
| 9 | Construction of road and drain on 2nd, 3rd and 4th cross roads of Friends colony in ward no. 71 | 19.80 |
| 10 | Construction of concrete drain on 1st main 9th cross left side road of Mayurnagara | 19.75 |
| 11 | Construction of concrete drain on 1st main 9th cross right side road of Mayurnagara | 19.10 |
| 12 | Construction of covering slabs over existing secondary storm water drain in ward no. 71 | 8.30 |
| 13 | Construction of concrete drain on 1st cross road of Maruthinagara right side in ward no. 71 | 19.75 |
| **Total Amount** | | 228.10 |

ವಾರ್ಡ್ 71ರ ಕಾರ್ಯವ್ಯಾಪ್ತಿಯಲ್ಲಿ ಪರಿಶಿಷ್ಠ ಜಾತಿ ಮತ್ತು ಜನಾಂಗದವರು ವಾಸಿಸುತ್ತಿರುವ ಪ್ರದೇಶದಲ್ಲಿ ಮೇಲ್ಕಂಡಂತೆ, ಶೇ. 22.75% ಯೋಜನೆಯಡಿಯಲ್ಲಿ ಪ್ರಸ್ಥಪಿಸಲಾಗಿರುವಾ ಒಟ್ಟು 13 ವಿವಿಧ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅತಿ ಅವಶ್ಯಕ ಮತ್ತು ಜರುರಾಗಿ ಮಳೆಗಾಲ ಬರುವ ಮುನ್ನ ನಿರ್ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗಳಿಗೆ ಸಂಬಂಧ ಪಟ್ಟಂತೆ ತಯಾರಿಸಲಾಗಿರುವ ಕ್ರಿಯಾ ಯೋಜನಾಪಟ್ಟಿಗೆ, 2012-13ನೇ ಸಾಲಿನ ಆಯವ್ಯಯದಲ್ಲಿ ಜಾಬ್‌ಕೋಡ್ ನೀಡಲು ಹಾಗೂ ಕೆಆರ್‌ಐಡಿಎಲ್‌ರವರ ಮುಖಾಂತರ ನಿರ್ವಹಿಸಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಅನುಮೊದನೇಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 03.08.2012ರ ಟಿಪ್ಪಣಿಯನ್ನು ಒಪ್ಪುತ್ತಾ ಕಾಮಗಾರಿಗಳನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಅರ್.ಐ.ಡಿ.ಎಲ್.ಸಂಸ್ಥೆಗೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 13. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 90/12-13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:02.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ ವಿಭಾಗದ ವಾರ್ಡ್ ಸಂಖ್ಯೆ 96ರ ಓಕಳಿಪುರಂ ವ್ಯಾಪ್ತಿಯಲ್ಲಿ ಬರುವ ಗೋಪಾಲಪುರ ಕೊಳಚೆ ಪ್ರದೇಶದಲ್ಲಿ ಶೇಕಡ 22.75ರ ಅನುದಾನದಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ವೈಯುಕ್ತಿಕ ಮನೆಗಳನ್ನು ನಿರ್ಮಿಸಿಕೊಡಲು ಪಾಲಿಕೆಯ ಸದಸ್ಯರಾದ ಶ್ರೀಮತಿ ಕ್ವೀನ್ ಎಲಿಜಬೆತ್ ರವರು ಪತ್ರ ನೀಡಿರುತ್ತಾರೆ.

ವಲಯ ಮಟ್ಟದ ಆಯ್ಕೆ ಸಮಿತಿಯ ಸಭೆಯಲ್ಲಿ ಆಯ್ಕೆಯಾದ 19 ಜನ ಫಲಾನುಭವಿಗಳ ಪಟ್ಟಿ ಕಂಡಿಕೆ ಸಂಖ್ಯೆ 7 ರಂತೆ ಇರುತ್ತದೆ. ಸದರಿ 19 ಜನ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಲು ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ) ರವರು ಈ ಕೆಳಕಂಡಂತೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ವೆಚ್ಚ ರೂ.ಲಕ್ಷಗಳಲ್ಲಿ |
|---|---|---|
| 1 | ವಾರ್ಡ್ ಸಂಖ್ಯೆ 96ರ ಓಕಳಿಪುರಂ ವ್ಯಾಪ್ತಿಯಲ್ಲಿ ಬರುವ ಗೋಪಾಲಪುರ ಕೊಳಚೆ ಪ್ರದೇಶದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ 19 ಜನ ಫಲಾನುಭವಿಗಳಿಗೆ ವೈಯುಕ್ತಿಕ ಮನೆಗಳನ್ನು ನಿರ್ಮಿಸುವ ಬಗ್ಗೆ | 57.00 |

ಸದರಿ ಕಾಮಗಾರಿಯನ್ನು 2012-13ನೇ ಸಾಲಿನ 22.75% ಕಾರ್ಯಕ್ರಮದ ಕ್ರಿಯಾ ಯೋಜನೆ ಸೇರಿಸಿಕೊಂಡು ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಕೋರಿ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 02.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 14. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 91/12-13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:02.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಂ. ಬಾಲಕೃಷ್ಣ, ವಾರ್ಡ್ ಸಂಖ್ಯೆ:68, ಸ್ವತ್ತಿನ ಸಂಖ್ಯೆ:1, ಮಾರುತಿ ಕಾಂಪ್ಲೆಕ್ಸ್, 60 ಅಡಿ ರಸ್ತೆ, ಜೆ.ಸಿ ರಸ್ತೆ, ಬೆಂಗಳೂರು-86. ರವರು ಮನವಿ ಸಲ್ಲಿಸಿ ತಮ್ಮ ಮಾಲಿಕತ್ವದ ಕಟ್ಟಡದಲ್ಲಿ ಪಾಲಿಕೆಯ ವತಿಯಿಂದ ನಡೆಸುತ್ತಿರುವ ಹೊಲಿಗೆ ತರಬೇತಿ ಕೇಂದ್ರದ ಕಟ್ಟಡಕ್ಕೆ ಸುಮಾರು 10 ವರ್ಷಗಳು ಪೂರ್ಣಗೊಂಡಿದ್ದರೂ ಸಹ ಕಟ್ಟಡದ ಬಾಡಿಗೆಯನ್ನು ಪರಿಷ್ಕರಿಸದೇ ಇದ್ದು, ಬಾಡಿಗೆ ಕರಾರು ನಿಯಮಗಳಂತೆ ಬಾಡಿಗೆ ನೀಡಿದ 11 ತಿಂಗಳ ಕಾಲಾವಧಿಯ ನಂತರದ ಅವಧಿಗೆ ಕಾಲಕಾಲಕ್ಕೆ ಮಾಸಿಕ ಬಾಡಿಗೆಯನ್ನು ಪರಿಷ್ಕರಿಸಿ ಬಾಡಿಗೆಯನ್ನು ಹೆಚ್ಚುವರಿ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಪಾಲಿಕೆಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿ ವಿಷಯದ ಸಂಖ್ಯೆ:08/2001-02, ದಿನಾಂಕ: 7/5/2001 ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ:ತೆ.ಆ/17/2001-02, ದಿನಾಂಕ: 16/4/2001 ರಂದು ನಿರ್ಣಯಿಸಿರುವಂತೆ ಹಳೇ ವಾರ್ಡ್ ನಂ:13, ಗೆಳೆಯರ ಬಳಗ, ಹೊಸ ವಾರ್ಡ್ ಸಂಖ್ಯೆ: 68 -ಮಹಾಲಕ್ಷ್ಮೀಪುರ ಇಲ್ಲಿನ ಉಚಿತ ಹೊಲಿಗೆ ತರಬೇತಿ ಕೇಂದ್ರಕ್ಕೆ ಸಂಬಂಧಪಟ್ಟಂತೆ ಮಹಾನಗರ ಪಾಲಿಕೆಗೆ ಸೇರಿದ ಯಾವುದೇ ಕಟ್ಟಡವು ಲಭ್ಯವಿಲ್ಲದ ಕಾರಣ ಖಾಸಗಿಯವರಾದ ಶ್ರೀ ಮುನಿಸ್ವಾಮಪ್ಪ ಎಂಬುವವರಿಗೆ ಸೇರಿದ ನಂ: 5, 10ನೇ ಮುಖ್ಯರಸ್ತೆ, ಮಾರುತಿ ಕಾಂಪ್ಲೆಕ್ಸ್, ಜೆ.ಸಿ.ನಗರ, ಬೆಂಗಳೂರು-86. ಈ ವಿಳಾಸದ ಕಟ್ಟಡವನ್ನು ದಿನಾಂಕ: 01-06-1999 ರಿಂದ ಮಾಸಿಕ ರೂ.3,000-00 ಗಳ ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದ್ದು, ತಹಲ್‌ವರೆಗೆ ನಿಗಧಿಪಡಿಸಿರುವ ದರದಲ್ಲಿ ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ಪಾವತಿಸಿ ಪಾಲಿಕೆಯಿಂದ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದೆ.

ಮುಂದುವರೆದು, ಪ್ರಸ್ತಾಪಿತ ವಿಷಯದ ಬಗ್ಗೆ ಪರಿಶೀಲಿಸಿ ಪ್ರಸ್ತುತ ಪಿ.ಡಬ್ಲ್ಯೂ.ಡಿ ದರಗಳ ಆಧಾರದ ಮೇರೆಗೆ ಕಟ್ಟಡಕ್ಕೆ ಬಾಡಿಗೆಯನ್ನು ನಿಗಧಿಪಡಿಸುವ ಬಗ್ಗೆ ವರದಿ ನೀಡಲು ಕಾರ್ಯಪಾಲಕ ಅಭಿಯಂತರರು (ಮಹಾಲಕ್ಷ್ಮೀಪುರಂ) ವಿಭಾಗ ರವರನ್ನು ಕೋರಲಾಗಿರುತ್ತದೆ. ಇದರನ್ವಯ ಸದರಿಯವರು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯವರಿಗೆ

ಪತ್ರ ಬರೆಯಲಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಂ: 04 ಕಟ್ಟಡಗಳ ಉಪ ವಿಭಾಗ, ಬೆಂಗಳೂರು ರವರು ಸದರಿ ಕಟ್ಟಡವನ್ನು ಪರಿಶೀಲನೆ ಮಾಡಿ, ನಿವೇಶನದ ವಿಸ್ತೀರ್ಣ 805–00 ಚ.ಅಡಿಗಳಿದ್ದು, ಇದರಲ್ಲಿ ಕಟ್ಟಡದ 2ನೇ ಮಹಡಿಯಲ್ಲಿರುವ ಫ್ಲಿಂತ್ ವಿಸ್ತೀರ್ಣ 493–06 ಚ.ಅಡಿಗಳ ಸ್ಥಳದಲ್ಲಿ ಹೊಲಿಗೆ ತರಬೇತಿ ಕೇಂದ್ರದ ಉಪಯೋಗಕ್ಕೆ ಪಡೆದ ಕಟ್ಟಡಕ್ಕೆ ¤.5,800.00ಗಳನ್ನು ಮಾಸಿಕ ಬಾಡಿಗೆ ನಿಗಧಿಪಡಿಸಿರುವುದು ನ್ಯಾಯ ಸಮ್ಮತವಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಕಟ್ಟಡಗಳ ವಿಶೇಷ ವಿಭಾಗ ರವರು ತಮ್ಮ ಪತ್ರದ ಸಂಖ್ಯೆ: ಕಾಇಂ/ರಮತ್ತುಕ/ವಿವಿ/ಬೆಂ/ಬಾಡಿಗೆ ನಿಗಧಿ/2012–13/997–98, ದಿನಾಂಕ: 04–05–2012ರಲ್ಲಿ ತಿಳಿಸಿರುವಂತೆ ಮುಂದಿನ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು(ಮಹಾಲಕ್ಷ್ಮೀಪುರ) ವಿಭಾಗ ರವರು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಾರ್ಡ್ ಸಂಖ್ಯೆ: 68–ಮಹಾಲಕ್ಷ್ಮೀಪುರ ವಿಭಾಗದಲ್ಲಿ ಪಾಲಿಕೆಯ ಕಟ್ಟಡಗಳು ಯಾವುದೇ ಲಭ್ಯವಿಲ್ಲದ ಕಾರಣ ಸದರಿ ವಾರ್ಡಿನ ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸುವ ಸಲುವಾಗಿ ಪ್ರಸ್ತುತ ಶ್ರೀ ಎಂ.ಬಾಲಕೃಷ್ಣ ರವರ ಮಾಲೀಕತ್ವದಲ್ಲಿ ಇರುವ ಸ್ವತ್ತಿನ ಸಂಖ್ಯೆ: 01, ಮಾರುತಿ ಕಾಂಪ್ಲೇಕ್ಸ್, 60 ಅಡಿ ರಸ್ತೆ, ಜೆ.ಸಿ.ನಗರ, ಬೆಂಗಳೂರು–560 086. ಈ ಕಟ್ಟಡದ 2ನೇ ಮಹಡಿಯ 493–06 ಚ.ಅಡಿಗಳ ಕಟ್ಟಡಕ್ಕೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆ, ರಸ್ತೆ ಮತ್ತು ಕಟ್ಟಡಗಳ ವಿಶೇಷ ವಿಭಾಗ ಹಾಗೂ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ಮಹಾಲಕ್ಷ್ಮೀಪುರಂ) ರವರ ವರದಿ ಆಧಾರ ಸದರಿ ಕಟ್ಟಡಕ್ಕೆ ನಿಗಧಿಪಡಿಸಿರುವ ಮಾಸಿಕ ಬಾಡಿಗೆ ¤.3,000/–ಗಳಿಂದ ¤.5,800/–ಗಳಿಗೆ ಪರಿಷ್ಕರಿಸಿ ದಿನಾಂಕ: 01–11–2010 ರಿಂದ ಜಾರಿಗೆ ಬರುವಂತೆ ಸದರಿ ಕಟ್ಟಡಕ್ಕೆ ಮಾಸಿಕ ಬಾಡಿಗೆ ¤.5,800/–(¤.ಐದು ಸಾವಿರದ ಎಂಟು ನೂರುಗಳು ಮಾತ್ರ) ಪಾವತಿ ಮಾಡಲು ಕೋರಿ ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 02.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 15. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 92/12–13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:16.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ 2011–12ನೇ ಸಾಲಿನ ನಿರ್ಗತಿಕ/ರಾತ್ರಿ ವಸತಿ ರಹಿತ ನಾಗರೀಕರಿಗೆ ಸೌಲಭ್ಯ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಈ ಕಛೇರಿಯ ಇ–ಟೆಂಡರ್ ಅಲ್ಪಾವಧಿ ಪ್ರಕಟಣೆ ಸಂಖ್ಯೆ:ಬಿಬಿಎಂಪಿ/ಮೊ.ವ/ಅ.ಅ/ಕ.ಶಾ/ಇ–ಟೆಂಡರ್/279/2012–13 ದಿನಾಂಕ 21.06.2012 ರಂತೆ ಅರ್ಹ ಸಂಸ್ಥೆಯವರನ್ನು ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿತ್ತು. ಈ ಸಂಬಂಧ ಸದರಿ ಕಾರ್ಯಕ್ರಮಕ್ಕೆ ಎರಡು ಸ್ವಯಂ ಸೇವಾ ಸಂಸ್ಥೆಗಳು ಇ–ಟೆಂಡರ್‌ನಲ್ಲಿ ಭಾಗವಹಿಸಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧ ತಾಂತ್ರಿಕ ಬಿಡ್‌ನ್ನು ದಿನಾಂಕ 11.07.2012 ರಂದು ತೆರೆಯಲಾಯಿತು. ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬಿಡ್‌ದಾರರು ಸಲ್ಲಿಸಿರುವ ನಿಗಧಿತ ದಾಖಲೆಗಳನ್ನು ವಲಯ ಮಟ್ಟದ ಟೆಂಡರ್ ಸಮಿತಿಯು ಪರಿಶೀಲಿಸಿ ಅಂಗೀಕರಿಸಲಾಯಿತು. ಈ ಕೆಳಕಂಡ ಸಂಸ್ಥೆಗಳು ಅರ್ಹರಾಗಿದ್ದು, ಅವುಗಳ ಆರ್ಥಿಕ ಬಿಡ್‌ನ್ನು ತೆರೆಯಲು ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಷರಾ |
|---|---|---|
| 1 | Surabhi Foundation Trust, Bangalore | ಅಂಗೀಕರಿಸಿದೆ |
| 2 | Gilgal Charitable Trust, Bangalore | ಅಂಗೀಕರಿಸಿದೆ |

ಮೇಲ್ಕಂಡ ಎರಡು ಅರ್ಹ ಸಂಸ್ಥೆಗಳ ಟೆಂಡರ್‌ಗಳ ಆರ್ಥಿಕ ಬಿಡ್‌ನ್ನು ದಿನಾಂಕ 13.07.2012ರಂದು ಟೆಂಡರ್ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಹಾಗೂ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಯಿತು. ಸದರಿ ಆರ್ಥಿಕ ಬಿಡ್‌ಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಒಂದು ಕೇಂದ್ರಕ್ಕೆ ನಮೂದಿಸಿರುವ ದರ | ಶ್ರೇಣಿ |
|---|---|---|---|
| 1 | Surabhi Foundation Trust, Bangalore | 405300 | ಎಲ್–1 |
| 2 | Gilgal Charitable Trust, Bangalore | 482340 | ಎಲ್–2 |

ಮೇಲ್ಕಂಡ ಎರಡು ಸಂಸ್ಥೆಗಳಲ್ಲಿ M/s. Surabhi Foundation Trust, Bangalore ರವರು ಆರ್ಥಿಕ ಪ್ರಸ್ತಾವನೆಯಲ್ಲಿ ಒಂದು ಕೇಂದ್ರಕ್ಕೆ ¤.4,05,300/–ಗಳ ಕನಿಷ್ಠ ದರವನ್ನು ನಮೂದಿಸಿ ಎಲ್–1 ಸಂಸ್ಥೆಯಾಗಿರುತ್ತಾರೆ. ಸದರಿ ಸಂಸ್ಥೆ ಬೊಮ್ಮನಹಳ್ಳಿ ವಲಯದಲ್ಲಿ ಸ್ಥಾಪನೆಯಾಗಿರುವ ಎರಡು ಕೇಂದ್ರಗಳ ನಿರ್ವಹಣೆಗಾಗಿ ವಾರ್ಷಿಕ ಮೊತ್ತ ಒಟ್ಟು ¤.8,10,600/–ಗಳಾಗಿರುತ್ತದೆ. ಸದರಿ ಸಂಸ್ಥೆಗೆ ಕರ್ನಾಟಕ ಪಾರದರ್ಶಕತೆ ಮಸೂದೆ ನಿಯಮ 1990 ಮತ್ತು 2000ರ ಅನುಸಾರ ಅಂಗೀಕರಿಸಿ ಕಾರ್ಯಾದೇಶ ನೀಡುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 16.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 16. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 93/12–13:

ವಿಶೇಷ/ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 06.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ 191, ಸಿಂಗಸಂದ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅತಿ ಜರೂರಾಗಿ ನಿರ್ವಹಿಸಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Construction of Houses i Kudlu colony at Singasandra, ward no.191 (25Nos.) | 75.00 |
| | **ಒಟ್ಟು** | **75.00** |

ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳೀಯ ನಗರ ಪಾಲಿಕೆ ಸದಸ್ಯರು ಹಾಗೂ ನಾಗರೀಕರು ಕೋರಿದ್ದು, ಸದರಿ ಕಾಮಗಾರಿಯು ಅವಶ್ಯಕತೆ ಇರುವುದರಿಂದ ಜರೂರಾಗಿ ನಿರ್ವಹಿಸಲು ಕೋರಿರುತ್ತಾರೆ.

ಈ ಕಾಮಗಾರಿಗಳಿಗೆ 2011–12ನೇ ಸಾಲಿನ ಶೇಕಡ 22.75ರ ಅನುದಾನದಡಿಯಲ್ಲಿ ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದ್ದು, ಕಾಮಗಾರಿ ಸಂಖ್ಯೆ ಪ್ರಮಣ ಪತ್ರವನ್ನು ಸಹ ಪಡೆಯಲಾಗಿರುತ್ತದೆ. ಮಾನ್ಯ ಆಯುಕ್ತರು ಪ್ರತ್ಯಾಯೋಜನೆ ಮಾಡಿರುವ ಅಧಿಕಾರದಂತೆ ಅಂದಾಜು ಪಟ್ಟಿಗೆ ಅಪರ ಆಯುಕ್ತರು, ಬೊಮ್ಮನಹಳ್ಳಿ ರವರು ಆಡಳಿತಾತ್ಮಕ ಅನುಮೋದನೆ

ಹಾಗೂ ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ರವರಿಂದ ತಾಂತ್ರಿಕ ಅನುಮೋದನೆ ಮತ್ತು ಡಿ.ಟಿ.ಎಸ್.ಗೆ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ದಿನಾಂಕ 03.04.2012ರಂದು ಪ್ರಕಟಣೆ ಹೊರಡಿಸಿ ಟೆಂಡರ್ ಕರೆಯಲಾಗಿದೆ.

ಮೇಲಿನ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಶ್ರೀ ವೆಂಕಟಕೃಷ್ಣರವರು 15% ಹೆಚ್ಚು ದರವನ್ನು ನಮೂದಿಸಿರುತ್ತಾರೆ. ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಸದರಿ ಗುತ್ತಿಗೆದಾರರು ಸಂಧಾನಿತ ದರಗಳನ್ನು ಸಲ್ಲಿಸಿರುತ್ತಾರೆ. ಅದರಂತೆ, ದರಗಳ ಮೊತ್ತ ₹.78,73,787.00 ಗಳಾಗಿದ್ದು, ಶೇಕಡ 4.99% ರಷ್ಟು ಹೆಚ್ಚಾಗಿರುತ್ತದೆ. ಅದರಂತೆ ಕೆಲಸ ನಿರ್ವಹಿಸಲು ಗುತ್ತಿಗೆದಾರರು ಒಪ್ಪಿದ್ದು, ಸಂಧಾನದ ನಂತರದ ಈ ಟೆಂಡರ್ ಸಿಂಧುತ್ವ ಹೊಂದಿರುತ್ತದೆ. ಶ್ರೀ ವೆಂಕಟಕೃಷ್ಣ ರವರು ನಮೂದಿಸಿರುವ ದರಗಳು ಅತಿ ಕನಿಷ್ಟವಾಗಿದ್ದು, ಟೆಂಡರ್ ಮೊತ್ತ ₹.78,73,787.00 ಗಳಿದ್ದು, ಅನುಮೋದಿತ ಅಂದಾಜು ಪಟ್ಟಿಯ ದರಗಳಿಗಿಂತ ಶೇಕಡ 4.99% ರಷ್ಟು ಹೆಚ್ಚುವರಿಯಾಗಿರುವ ಟೆಂಡರ್‌ನ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 06.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 17. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 94/12–13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:14.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ನಂ.09 (ವಿದ್ಯಾರಣ್ಯಪುರ) ವ್ಯಾಪ್ತಿಯಲ್ಲಿ ಬಹುತೇಕ ಪ್ರದೇಶಗಳು ಗ್ರಾಮೀಣ ಪ್ರದೇಶಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನವಾಗಿರುತ್ತವೆ. ಸದರಿ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಹೆಚ್ಚಿನ ಜನರು ವಾಸಿಸುತ್ತಿದ್ದು ಇವರು ವಾಸಿಸುವ ಪ್ರದೇಶವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಅತ್ಯಂತ ಹಿಂದುಳಿದ ಪ್ರದೇಶವಾಗಿರುತ್ತದೆ. ಸದರಿ ಪ್ರದೇಗಳಲ್ಲಿನ ರಸ್ತೆಗಳು ಹಾಳಾಗಿದ್ದು, ಗುಂಡಿಗಳಿಂದ ಕೂಡಿರುತ್ತವೆ ಹಾಗೂ ರಸ್ತೆ ಬದಿ ಚರಂಡಿಗಳಿಲ್ಲದೆ ನಿತ್ಯ ಬಳಕೆಯ ನೀರು ಹಾಗು ಮಳೆನೀರು ರಸ್ತೆಯ ಮೇಲೆ ಹರಿದು ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಮಾನ್ಯ ಬೃ.ಬೆಂ.ಮ.ಪಾಲಿಕೆ ಸದಸ್ಯರು, ಸದರಿ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಡಾಂಬರೀಕರಣ, ಕಾಂಕ್ರಿಟ್ ರಸ್ತೆಗಳನ್ನು ಅಳವಡಿಸುವುದು ಮತ್ತು ಇನ್ನಿತರೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಕೋರಿರುತ್ತಾರೆ.

ಆದ್ದರಿಂದ ಸದರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2012–13ನೇ ಸಾಲಿನಲ್ಲಿ ಶೇಕಡ 22.75ರ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ವಿವರ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | Improvements to main roads and drains at Thindlu Mariyamma Colony in Ward No.09 | 19.00 |
| 2 | Improvements to main roads and drains at Thindlu Mariyamma Colony in Ward No.09 | 19.00 |
| 3 | Improvements to Interior cross roads and drains at Thindlu Mariyamma Colony in Ward No.09 | 19.00 |
| 4 | Improvements to main roads and drains at Thindlu Basavalingappa colony in Ward No.09 | 19.00 |

| | | |
|---|---|---|
| 5 | Improvements to roads and drains at Thindlu Basavalingappa Bavana opposite right side roads in Ward No.09 | 19.00 |
| 6 | Improvements to Kempegowdanagara main roads and drains in Ward No.09 | 19.00 |
| 7 | Improvements to Kempegowdanagara cross roads and drains in Ward No.09 | 16.00 |
| 8 | Construction of Narasipura Government School Building in Ward No.09 | 35.00 |
| 9 | Improvements to Narasipura main roads and drains in Ward No.09 | 19.00 |
| 10 | Improvements to Narasipura cross roads and drains in Ward No.09 | 15.00 |
| **Total** | | **199.00** |

ಮೇಲ್ಕಂಡ 10 ಕಾಮಗಾರಿಗಳಿಗೆ ಒಟ್ಟು ಮೊತ್ತ ¤.199.00 ಲಕ್ಷ ವೆಚ್ಚವಾಗಲಿದ್ದು, ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆಂದು, ಅನುಮೋದನೆ ನೀಡಲು, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಮಂಡಿಸಿರುತ್ತಾರೆ.

ವಾರ್ಡ್ ಸಂಖ್ಯೆ 09 (ವಿದ್ಯಾರಣ್ಯಪುರ) ರಲ್ಲಿ ಶೇಕಡ 22.75ರಡಿಯಲ್ಲಿ ಮೇಲ್ಕಂಡಂತೆ ವಿವರಿಸಲಾದ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಲು ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 06.08.2012ರ ಟಿಪ್ಪಣಿಯನ್ನು ಒಪ್ಪುತ್ತಾ ಕಾಮಗಾರಿಗಳನ್ನು ತ್ವರಿತವಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಅರ್.ಐ.ಡಿ.ಎಲ್.ಸಂಸ್ಥೆಗೆ ವಹಿಸಲು ಸಮಿತಿಯು ತೀರ್ಮಾನಿಸಿತು.

## 18. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 95/12-13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:13.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ, ಶ್ರೀ ಶಂಕರ್.ಎಸ್, ನಂ: 6, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಇ.ಎಸ್.ಐ ಆಸ್ಪತ್ರೆಯ ಹತ್ತಿತ, ರಾಮಕೃಷ್ಣ ಸೇವಾನಗರ, ಶ್ರೀರಾಮಪುರಂ, ಬೆಂಗಳೂರು-21. ಇಲ್ಲಿ ವಾಸವಾಗಿರುವ ಇವರಿಗೆ ಎಡಗೈ ಮುರಿದು ಕೊಂಡಿರುವುದರಿಂದ ವೈದ್ಯರು ತುರ್ತು ಶಸ್ತ್ರಚಿಕಿತ್ಸೆ ಅಗತ್ಯವಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಇವರ ಶಸ್ತ್ರಚಿಕಿತ್ಸೆಗೆ ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಿಚ್ಚಿಸಿದ್ದು, ಇದಕ್ಕಾಗಿ ¤.80,000/-ಗಳ ವೈದ್ಯಕೀಯ ಅಂದಾಜು ವೆಚ್ಚವಾಗಲಿದೆ ಎಂದು ವೈದ್ಯರು ತಿಳಿಸಿರುವಂತೆ ವೈದ್ಯಕೀಯ ವೆಚ್ಚವನ್ನು ಭರಿಸಲು ಉಲ್ಲೇಖ (1)ರಂತೆ ಪಾಲಿಕೆ ಸದಸ್ಯರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದವರಾಗಿದ್ದು, ಇವರು ತೀರಾ ಬಡವರಾಗಿದ್ದು, ಆರ್ಥಿಕವಾಗಿ ಹಿಂದುಳಿದಿರುತ್ತಾರೆ ಆದ್ದರಿಂದ ಸದರಿಯವರಿಗೆ ಪಾಲಿಕೆಯಿಂದ ಸದರಿ ವೈದ್ಯಕೀಯ ವೆಚ್ಚಕ್ಕಾಗಿ ಧನ ಸಹಾಯ ಮಾಡಲು ಮನವಿ ಪತ್ರದಲ್ಲಿ ಕೋರಿರುವುದನ್ನು ಪರಿಶೀಲಿಸಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಶೇ.22.75ರ ಅನುದಾನದಲ್ಲಿ ಬಿಡುಗಡೆ ಮಾಡಲು ಉಲ್ಲೇಖ(3)ರಂತೆ ಆರೋಗ್ಯಾಧಿಕಾರಿಗಳು(ಪಶ್ಚಿಮ) ರವರು ಶೀಫಾರಸ್ಸು ಮಾಡಿರುತ್ತಾರೆ.

ಮುಂದುವರೆದು, ಉಲ್ಲೇಖ(2)ರಲ್ಲಿ ಈ ಬಗ್ಗೆ ಉಪ ಆರೋಗ್ಯ ವೈದ್ಯಾಧಿಕಾರಿ, ರಾಮ ಮಂದಿರ ಉಪ-ವಿಭಾಗ ರವರು ಸ್ಥಳ ಪರಿಶೀಲನೆ ನಡೆಸಿ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರಿಸಲಾಗಿ ಶ್ರೀ ಶಂಕರ್.ಎಸ್, ನಂ: 6, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಇ.ಎಸ್.ಐ ಆಸ್ಪತ್ರೆಯ ಹತ್ತಿತ, ರಾಮಕೃಷ್ಣ ಸೇವಾನಗರ, ಶ್ರೀರಾಮಪುರಂ, ಬೆಂಗಳೂರು-21. ರವರು ಎಡಗೈ ಮುರಿದ ಖಾಯಿಲೆಯಿಂದ ಬಳಲುತ್ತಿದ್ದು, ಆರ್ಥಿಕವಾಗಿ ಸಂಕಷ್ಟದಲ್ಲಿ ಇರುತ್ತಾರೆಂದು ತಿಳಿಸಿ ತುರ್ತು ಶಸ್ತ್ರ ಚಿಕಿತ್ಸೆಗೆ ಅವಶ್ಯವಿರುವ ವೈದ್ಯಕೀಯ ವೆಚ್ಚದ ವಿವರವು ಆಸ್ಪತ್ರೆಯ ಮುಖ್ಯಸ್ಥರು ನೀಡಿರುವ ವರದಿ ಆಧಾರ ಶೇ.22.75ರ ಯೋಜನೆಯಡಿಯಲ್ಲಿ

ಸದರಿಯವರು ಚಿಕಿತ್ಸೆಯನ್ನು ಪಡೆಯಲು ಮಲ್ಲಿಗೆ ಆಸ್ಪತ್ರೆಗೆ ¤.80,000-00 ಗಳ ಮೊತ್ತವನ್ನು ಮಂಜೂರು ಮಾಡಲು ಆರೋಗ್ಯಾಧಿಕಾರಿ(ಪಶ್ಚಿಮ) ರವರು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ 2011-12ನೇ ಸಾಲಿನ ಆಯ-ವ್ಯಯ ಪರಿಶಿಷ್ಟ ಜಾತಿ ವರ್ಗದ ಇತರೆ ಕಲ್ಯಾಣ ಕಾರ್ಯಕ್ರಮದಡಿ ವೈದ್ಯಕೀಯ ಸಹಾಯ/ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ, ಅಂಗಜೋಡಣೆ, ಭಾರಿ ಶಸ್ತ್ರ ಚಿಕಿತ್ಸೆ, ಕಣಿನ ಪೊರೆ ಶಸ್ತ್ರ ಚಿಕಿತ್ಸೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಆರ್ಥಿಕ ಸಹಾಯ ಉಪ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಮೊತ್ತ ¤.22.00 ಲಕ್ಷ ಗಳಲ್ಲಿ ವೈದ್ಯಕೀಯ ವೆಚ್ಚವನ್ನು ಪಾಲಿಕೆಯಿಂದ ಭರಿಸಬಹುದಾಗಿದೆ.

ಈ ಅಂಶಗಳ ಹಿನ್ನಲೆಯಲ್ಲಿ ಮೇಲ್ಕಂಡಂತೆ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ¤.22.00 ಲಕ್ಷಗಳಲ್ಲಿ ಶ್ರೀ ಶಂಕರ್.ಎಸ್, ನಂ: 6, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಇ.ಎಸ್.ಐ ಆಸ್ಪತ್ರೆಯ ಹತ್ತಿತ, ರಾಮಕೃಷ್ಣ ಸೇವಾನಗರ, ಶ್ರೀರಾಮಪುರಂ, ಬೆಂಗಳೂರು-21. ರವರು ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರಾಗಿ ಎಡಗೈ ಮುರಿತ ಖಾಯಿಲೆಯಿಂದ ಬಳಲುತ್ತಿರುವ ಇವರು ಮಲ್ಲಿಗೆ ಆಸ್ಪತ್ರೆ, ಕ್ರೀಸೆಂಟ್ ರಸ್ತೆ, ಬೆಂಗಳೂರು-560 001. ಇಲ್ಲಿ ಶಸ್ತ್ರ ಚಿಕಿತ್ಸೆ ಪಡೆಯಲು ¤.80,000.00ಗಳ ಸಹಾಯ ಧನವನ್ನು ಮಂಜೂರು ಮಾಡಿ ಅರ್ಜಿದಾರರಿಗೆ ಚೆಕ್ ಮೂಲಕ ವಿತರಿಸುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 13.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 19. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 96/12-13:

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:13.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯಕ್ಕೆ ಸಂಬಂಧಿಸಿದಂತೆ, ಶ್ರೀ ಕೇಶವಯ್ಯ ಪಿ., ನಂ: 2, 4ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಜೆ.ಜೆ.ಆರ್.ನಗರ, ಬೆಂಗಳೂರು-560 018. ಇಲ್ಲಿ ವಾಸವಾಗಿರುವ ಇವರು ಮನವಿ ಸಲ್ಲಿಸಿ ತಮ್ಮ ಮಗಳಾದ ಕು॥ ಕಾದಂಬರಿ.ಕೆ ಏಳು ವರ್ಷ ವಯಸ್ಸುಳ್ಳ ಇವರು ಸ್ಪೆನಾ ಜಿಫ್ಲಿಡಾ ಸೊಂಟದ ಭಾಗದಲ್ಲಿ ಗಡ್ಡೆಯಿಂದ ನರಳುತ್ತಿದ್ದು, ವೈದ್ಯರ ಸಲಹೆಯಂತೆ ಫಿಜಿಯೋಥೆರಪಿ ಚಿಕಿತ್ಸೆಯನ್ನು ಕೊಡಿಸುತ್ತಿದ್ದು, ಈ ಚಿಕಿತ್ಸೆಗೆ ಪ್ರತಿ ದಿನಕ್ಕೆ ¤.200/-(ಭಾನುವಾರ ಹೊರತುಪಡಿಸಿ) ತಿಂಗಳಿಗೆ ¤.5000/-ಗಳ ವೆಚ್ಚವಾಗುತ್ತಿದ್ದು, ಖಾಸಗಿ ದಿನಕೂಲಿ ನೌಕರರಾದ ನನಗೆ ಬರುವ ಸಂಬಳದಲ್ಲಿ ಸಂಸಾರವನ್ನು ನಿಭಾಯಿಸಿಕೊಂಡು ಮಗಳ ಚಿಕಿತ್ಸೆಗೆ ವೆಚ್ಚ ಭರಿಸಲು ಕಷ್ಟವಾಗುತ್ತಿದ್ದು, ಪ್ರತಿ ತಿಂಗಳು ಚಿಕಿತ್ಸೆಗೆ ವ್ಯಯವಾಗುವ ¤.5000/-ಗಳನ್ನು ಪಾಲಿಕೆಯ ಕಲ್ಯಾಣ ಇಲಾಖೆಯಿಂದ ಸಹಾಯಧನವನ್ನಾಗಿ ಮಂಜೂರು ಮಾಡಲು ಉಲ್ಲೇಖ (1)ರಂತೆ ಅರ್ಜಿದಾರರು ಕೋರಿರುವುದನ್ನು ಪರಿಶೀಲಿಸಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಶೇ.22.75ರ ಅನುದಾನದಲ್ಲಿ ಬಿಡುಗಡೆ ಮಾಡಲು ಉಲ್ಲೇಖ(3)ರಂತೆ ಆರೋಗ್ಯಾಧಿಕಾರಿಗಳು(ಪಶ್ಚಿಮ) ರವರು ಶೀಫಾರಸ್ಸು ಮಾಡಿರುತ್ತಾರೆ.

ಮುಂದುವರೆದು, ಉಲ್ಲೇಖ(2)ರಲ್ಲಿ ಈ ಬಗ್ಗೆ ಉಪ ಆರೋಗ್ಯ ವೈದ್ಯಾಧಿಕಾರಿ, ಜೆ.ಜೆ.ಆರ್.ನಗರ ಉಪ-ವಿಭಾಗ ರವರು ಸ್ಥಳ ಪರಿಶೀಲನೆ ನಡೆಸಿ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರಿಸಲಾಗಿ ಶ್ರೀ ಕೇಶವ ಮತ್ತು ಇವರ ಮಗಳಾದ ಕು॥ ಕೆ.ಕಾದಂಬರಿ, ವಯಸ್ಸು 7 ವರ್ಷಗಳು, ನಂ: 2, 4ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಜೆ.ಜೆ.ಆರ್.ನಗರ, ಬೆಂಗಳೂರು-560 018. ರವರು ಈ ಸ್ಥಳದಲ್ಲಿ ವಾಸವಾಗಿರುತ್ತಾರೆ. ಇವರ ಮಗಳು ಕೆ.ಕಾದಂಬರಿ ಅಂಗವಿಕಲತೆ ಅಂದರೇ ಸ್ಪೆನಾ ಜಿಫ್ಲಿಡಾ ಸೊಂಟದ ಭಾಗದಲ್ಲಿ ಗಡ್ಡೆಯಿಂದ ನರಳುತ್ತಿದ್ದು, ಈ ಖಾಯಿಲೆಗೆ ಪ್ರತಿ ದಿನ ಫಿಜಿಯೋಥೆರಪಿ ಮಾಡಿಸಬೇಕೆಂದು ಇದರ ವೆಚ್ಚ ದಿನಕ್ಕೆ ¤.250/-ರಗಳು ಖರ್ಚು ಮಾಡಬೇಕೆಂದು ತಿಂಗಳಿಗೆ ¤.7500/-ಗಳು ಆಗುತ್ತದೆ ಎಂದು ಇದರನ್ವಯ ವೈದ್ಯರ ಪತ್ರ, ಪಂಚನಾಮ ವರದಿ ಮತ್ತು ತನಿಖಾ ಪಟ್ಟಿಯೊಂದಿಗೆ ಲಗತ್ತಿಸಿ ಸಲ್ಲಿಸಿದ್ದು, ಇದರನ್ವಯ ಅರ್ಜಿದಾರರು ವೈದ್ಯರ ಸಲಹೆಯಂತೆ

ಮೂರ್ತಿ ಆರ್ಥೋಪೆಡಿಕ್ ಸೆಂಟರ್‌ನಲ್ಲಿ ಸ್ಪೆನಾ ಜಿಫ್ಲಿಡಾ ಖಾಯಿಲೆಗೆ ಸಂಬಂಧಿಸಿದಂತೆ ಫಿಜಿಯೋಥೆರಪಿ ಚಿಕಿತ್ಸೆಗಾಗಿ ಕೋರಿರುವ ¤.10,000/-ಗಳ ಮೊತ್ತವನ್ನು 2012-13ನೇ ಸಾಲಿಗೆ ವೈದ್ಯಕೀಯ ಧನ ಸಹಾಯ ಬಿಡುಗಡೆ ಮಾಡಲು ಆರೋಗ್ಯಾಧಿಕಾರಿ(ಪಶ್ಚಿಮ) ರವರು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ 2011-12ನೇ ಸಾಲಿನ ಪಶ್ಚಿಮ ವಲಯ ಕಲ್ಯಾಣ ಇಲಾಖೆಯ ವಿಕಲಚೇತನರು ಮತ್ತು ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮದಡಿ ವಿಕಲಚೇತನರಿಗೆ ಆರೋಗ್ಯ ತಪಾಸಣಾ ಶಿಬಿರ ನಡೆಸಲು, ಪಿಸಿಯೋತೆರಪಿ, ವೈದ್ಯಕೀಯ ಸಲಹೆ, ಮತ್ತು ಮಾರ್ಗದರ್ಶನ ನೀಡಲು ಹಾಗೂ ಪುನರ್ ವಸತಿ ಕಾರ್ಯಕರ್ತರಿಗೆ ಗೌರವ ಧನ ಉಪ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಮೊತ್ತ ¤.2.20 ಲಕ್ಷ ಗಳಲ್ಲಿ ವೈದ್ಯಕೀಯ ವೆಚ್ಚವನ್ನು ಪಾಲಿಕೆಯಿಂದ ಭರಿಸಬಹುದಾಗಿದೆ.

*ಈ ಅಂಶಗಳ ಹಿನ್ನಲೆಯಲ್ಲಿ ಮೇಲ್ಕಂಡಂತೆ ಲೆಕ್ಕಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ¤.2.20 ಲಕ್ಷಗಳಲ್ಲಿ ಶ್ರೀ ಕೇಶವ ಇವರ ಮಗಳಾದ ಕು|| ಕೆ.ಕಾದಂಬರಿ, ವಯಸ್ಸು 7 ವರ್ಷಗಳು, ನಂ: 2, 4ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಜೆ.ಜೆ.ಆರ್.ನಗರ, ಬೆಂಗಳೂರು-560 018. ರವರು ಅಂಗವಿಕಲತೆ ಅಂದರೇ ಸ್ಪೆನಾ ಜಿಫ್ಲಿಡಾ ಸೊಂಟದ ಭಾಗದಲ್ಲಿ ಗಡ್ಡೆಯಿಂದ ನರಳುತ್ತಿರುವ ಇವರು ಮೂರ್ತಿ ಆರ್ಥೋಪೆಡಿಕ್ ಸೆಂಟರ್, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಪ್ರತಿ ದಿನ ಫಿಜಿಯೋಥೆರಪಿ ಚಿಕಿತ್ಸೆ ಪಡೆಯಲು ¤.10,000/-ಗಳನ್ನು ಅರ್ಜಿದಾರರಿಗೆ ಮರುಪಾವತಿಗಾಗಿ ಮಂಜೂರು ಮಾಡಿ, ಇನ್ನು ಮುಂದೆ ಪ್ರತಿ ತಿಂಗಳು ಅರ್ಜಿದಾರರು ಸದರಿ ಚಿಕಿತ್ಸೆಗೆ ವ್ಯಯ ಮಾಡಿರುವ ಅಧಿಕೃತ ರಶೀಧಿಗಳನ್ನು ಪಡೆದು ಸಂಬಂಧಪಟ್ಟ ಆರೋಗ್ಯ ಅಧೀಕ್ಷಕರ ಅಭಿಪ್ರಾಯ ವರದಿ ಪಡೆದು ನಂತರ ಅರ್ಹದಾಯಕ ವೈದ್ಯಕೀಯ ವೆಚ್ಚವನ್ನು ಮಂಜೂರು ಮಾಡಿ ಅರ್ಜಿದಾರರಿಗೆ ಚೆಕ್ ಮೂಲಕ ವಿತರಿಸುವ ಬಗ್ಗೆ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.*

**ನಿರ್ಣಯ:** ಅಪರ ಆಯುಕ್ತರು (ಯೋಜನೆ) ರವರ ದಿನಾಂಕ 13.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 20. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 97/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:01.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ JNNURM ಯೋಜನೆ ಅಡಿಯಲ್ಲಿ ಬಿ.ಎಸ್.ಯು.ಪಿ. ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಿರುವ 13 ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯದೊಂದಿಗೆ ಒಟ್ಟು 1524 ವಸತಿ ಗೃಹಗಳನ್ನು ನಿರ್ಮಿಸಲು ಈಗಾಗಲೇ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಸಂಸ್ಥೆಯವರೊಂದಿಗೆ ದಿನಾಂಕ:27-03-2008 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ. ತದನಂತರ, ದಿನಾಂಕ:01-03-2010 ರಂದು ನಡೆದ 15ನೇ SLEC ಸಭೆಯ ನಿರ್ಣಯದಂತೆ, ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಮಂಡಳಿ ರವರೊಂದಿಗೆ ನಿರ್ಮಿಸಲು ಉದ್ದೇಶಿಸಿದ್ದ ಒಟ್ಟು 1524 ವಸತಿಗಳಲ್ಲಿ 124 ವಸತಿಗಳನ್ನು ಹೊರತುಪಡಿಸಿ ಬಾಕಿ ಉಳಿದ 1400 ವಸತಿ ಗೃಹಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಲಾಗಿರುತ್ತದೆ. ಸದರಿ ತೀರ್ಮಾನದಂತೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಉಲ್ಲೇಖ (2)ರ ಪತ್ರದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕರಡು ಒಡಂಬಡಿಕೆ ಪತ್ರವನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಕರಡು ಒಡಂಬಡಿಕೆಯಲ್ಲಿ 9 ಕೊಳಚೆ ಪ್ರದೇಶಗಳ ಒಟ್ಟು 1400 ಮನೆಗಳು ಹಾಗೂ ನೇತಾಜಿ ಸುಭಾಷ್‌ಚಂದ್ರ ಬೋಸ್ ಕೊಳಚೆ ಪ್ರದೇಶದ 48 ವಸತಿಗಳ ಟೆಂಡರ್ ಪ್ರೀಮಿಯಂ ಮತ್ತು ಹೆಚ್ಚುವರಿ ಮೊತ್ತ ಸೇರಿ ಒಟ್ಟು ¤.17.19

ಕೋಟಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಭರಿಸಬೇಕೆಂದು ಷರತ್ತುಗಳನ್ನು ಅಳವಡಿಸಲಾಗಿರುತ್ತದೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಪತ್ರದ ಪ್ರತಿಯನ್ನು ಅನುಬಂಧ–1 ರಲ್ಲಿ ಅಡಕಗೊಳಿಸಲಾಗಿದೆ.

ಅಲ್ಲದೇ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ರವರ (KUIDFC) ಉಲ್ಲೇಖ ಪತ್ರ (1) ರಲ್ಲಿ JNNURM ಯೋಜನೆಯ ನಿಯಮಾವಳಿಗಳಂತೆ ಟೆಂಡರ್ ಪ್ರೀಮಿಯಂ ಮತ್ತು ಹೆಚ್ಚುವರಿ ಮೊತ್ತವನ್ನು ಭರಿಸಲು ಯೋಜನೆಯಲ್ಲಿ ಅವಕಾಶವಿರುವುದಿಲ್ಲವೆಂದು, ಈ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ಮೇಲ್ವಿಚಾರಣ ಸಂಸ್ಥೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆ ಭರಿಸಬೇಕೆಂದು ತಿಳಿಸಲಾಗಿರುತ್ತದೆ. (ಪತ್ರದ ಪ್ರತಿಯನ್ನು ಅನುಬಂಧ–2ರಲ್ಲಿ ಅಡಕಗೊಳಿಸಲಾಗಿದೆ).

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಕೊಳಚೆ ಅಭಿವೃದ್ಧಿ ಪ್ರದೇಶವು ಸೇರಿದಂತೆ 12 ಕೊಳಚೆ ಪ್ರದೇಶಗಳಲ್ಲಿ ಒಟ್ಟು 1448 ವಸತಿಗಳ ನಿರ್ಮಾಣವನ್ನು ಈ ಕೆಳಕಂಡ ಪ್ರದೇಶಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಕೊಳಚೆ ಪ್ರದೇಶಗಳ ಮತ್ತು ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿರುವ ಮೊತ್ತ ವಿವರಗಳು ಈ ಕೆಳಕಂಡಂತಿರುತ್ತದೆ.

## I. BBMP Phase-I (1400 Du's)

(▫.. In lakhs)

| *Sl. No.* | *Name of the Works* | *No. of House s* | *Name of the agency* | *Amount put to tender based on SR of 2006-07* | *Contract Cost* |
|---|---|---|---|---|---|
| *1)* | *Construction of 288 Houses (G+3) including Infrastructure works at Arasu Colony Slum in Bangalore City.* | *288* | *Sri. G Chandre Gowda* | *832.19* | *1151.31* |
| *2)* | *Construction of 120 Houses (G+3) including Infrastructure works at RK Mutt Slum in Bangalore City.* | *120* | *Sri. B Nagaraj* | *360.14* | *491.48* |
| *3)* | *Construction of 48 Houses (G+3) including Infrastructure works at Mariyamma Slum in Bangalore City.* | *48* | *Sri Sridharbabu* | *148.20* | *191.19* |
| *4)* | *Construction of 84 Houses (GF) including Infrastructure works at Indiragandhi Slum in Bangalore City.* | *84* | *Sri. Parasanna N Rajpurohith* | *272.63* | *371.59* |
| *5)* | *Construction of 176 Houses (G+3) including Infrastructure works at Vyalikaval-Dobighat Slum in* | *176* | *M/s Balaji & Co* | *524.85* | *627.28* |

| | | | | | |
|---|---|---|---|---|---|
| | *Bangalore City.* | | | | |
| 6) | *Construction of 44 Houses (G+3) including Infrastructure works at Tungabhadra Slum in Bangalore City.* | 44 | Sri. K Rajareddy | 140.56 | 166.82 |
| 7) | *Construction of 112 Houses (G+3) including Infrastructure works at Brundavan Nagar Dobighat Slum in Bangalore City.* | 112 | Sri Prasanna N Rajpurohith | 343.29 | 484.41 |
| 8) | *Construction of 144 Houses (G+3) including Infrastructure works at AD Halli Slum in Bangalore City.* | 144 | M/s Yankee Builders | 446.40 | 620.54 |
| 9) | *Construction of 128 Houses (G+3) including Infrastructure works at Kavika Slum in Bangalore City.* | 128 | Sri Venkatesh Reddy | 389.69 | 542.75 |
| 10) | *Construction of 96 Houses (G+3) including Infrastructure works at Gangondanahalli Slum in Bangalore City.* | 96 | M/s Yankee Builders | 295.75 | 409.68 |
| 11) | *Construction of 160 Houses (G+3) including Infrastructure works at Seegehalli, K.R. Puram in Bangalore City under JNNURM-BSUP Scheme (BBMP) by adopting Fast Track Techonology (DBT).* | 160 | M/s Maverick Holdings and Investments Private Limited | 496.72 | 664.00 |
| | ***GRAND TOTAL*** | **1400** | | **4250.42** | **5721.05** |

## II. Netaji Slum (48 Du's)

| **Sl. No.** | **Name of Works** | **No. of Houses** | **Name of agency** | **Project Cost** | **Contract Cost** |
|---|---|---|---|---|---|
| 1) | *Construction of 48 Houses (G+3) including Infrastructure works at Netaji Slum in Bangalore City.* | 48 | M/s DEC Infrastructure | 183.00 | 181.92 |

ಮೇಲ್ಕಂಡ ಕೊಳಚೆ ಪ್ರದೇಶಗಳ ಅಂದಾಜು ಮೊತ್ತ 2006-07 ರ ಸಾಲಿನ ಲೋಕೋಪಯೋಗಿ ಇಲಾಖೆಯ ದರಸೂಚಿ ಪಟ್ಟಿಯಂತೆ 37 ಕೋಟಿ 53 ಲಕ್ಷಗಳಾಗಿರುತ್ತದೆ. 15ನೇ SLEC ಸಭೆಯ ತೀರ್ಮಾನದಂತೆ, ಸದರಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಿದ್ದು ಸದರಿ ಸಂಸ್ಥೆ ಈಗಾಗಲೇ ಟೆಂಡರ್‌ಗಳನ್ನು ಕರೆದು ಗುತ್ತಿಗೆದಾರರ ಹೆಸರುಗಳನ್ನು ನಿರ್ಣಯಿಸಲಾಗಿರುತ್ತದೆ. ವಿವಿಧ ಗುತ್ತಿಗೆದಾರರ ಹೆಸರು ಮತ್ತು ಅವರು ನಮೂದಿಸಿರುವ ಟೆಂಡರ್ ಮೊತ್ತಗಳನ್ನು ಮೇಲಿನ ಪಟ್ಟಿಯಲ್ಲಿ ವಿವರಿಸಲಾಗಿರುತ್ತದೆ. ಈ ಎಲ್ಲಾ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಕೋರಿಕೆಯಂತೆ ಕಾಮಗಾರಿಗೆ ತಗಲುವ ಟೆಂಡರ್ ಪ್ರೀಮಿಯಂ ಹಾಗೂ ಹೆಚ್ಚುವರಿ ಮೊತ್ತ ¤.17.19ಕೋಟಿಗಳನ್ನು ಪಾಲಿಕೆಯ ವತಿಯಿಂದ ಭರಿಸಲು ಅನುಮೋದನೆಗಾಗಿ ಟಿಪ್ಪಣಿಯನ್ನು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

-ಮುಂದೂಡಿದೆ-

## 21. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 98/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 16.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ 2011-12ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಬೇಕಾದ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಕ್ಕಾಗಿ ಉಲ್ಲೇಖ (1)ರಂತೆ ಟಿಪ್ಪಣಿ ಮಂಡಿಸಲಾಗಿರುತ್ತದೆ. ಈ ಬಗ್ಗೆ ಉಲ್ಲೇಖ (2)ರಂತೆ ದಿನಾಂಕ:15.02.2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ನಡೆದ ನಡುವಳಿಗಳ ವಿಷಯದ ಸಂಖ್ಯೆ: ಸಾನ್ಯಾಸ್ಥಾಸ 297/11-12 ರ ನಿರ್ಣಯದಲ್ಲಿ 2010-11ನೇ ಸಾಲಿನ ಕ್ರಿಯಾ ಯೋಜನೆಯಂತೆ ಎಲ್ಲಾ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳದೆ ಹೆಚ್ಚು ಅವಶ್ಯವಿರುವ/ಬೇಡಿಕೆ ಇರುವ ಕಾರ್ಯಕ್ರಮಗಳನ್ನು ಪ್ರತ್ಯೇಕಿಸಿ ಜೊತೆಗೆ ಸಾರ್ವಜನಿಕರಿಗೆ ಉಪಯೋಗವಾಗುವ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದು ಎಂಬುದಾಗಿ ತೀರ್ಮಾನವಾಗಿರುತ್ತದೆ.

ಪಾಲಿಕೆಯ ಕಲ್ಯಾಣ ವಿಭಾಗದಿಂದ ಪರಿಶಿಷ್ಟ ಜಾತಿ/ಪಂಗಡದವರಿಗೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ, ಮಹಿಳೆಯರಿಗೆ, ಸಾಮಾನ್ಯ ವರ್ಗ ಹಾಗು ವಿಕಲಚೇತನರಿಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ತರಬೇತಿ, ಸೌಲಭ್ಯ/ಸವಲತ್ತು, ಆರ್ಥಿಕ ಸಹಾಯ ನೀಡುವಂತಹ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎಲ್ಲಾ ಕಾರ್ಯಕ್ರಮಗಳಿಗೆ ಪ್ರತಿ ವರ್ಷ ಅನುದಾನ ನಿಗಧಿಪಡಿಸಿಕೊಂಡು ಕ್ರಿಯಾಯೋಜನೆ ತಯಾರಿಸಲಾಗುತ್ತಿದ್ದು, ಇವುಗಳ ಪೈಕಿ ಕೆಲವೊಂದು ಕಾರ್ಯಕ್ರಮಗಳಿಗೆ ಸಾರ್ವಜನಿಕರಿಂದ ಹೆಚ್ಚಿನ ಅರ್ಜಿಗಳು ಬರುತ್ತಿಲ್ಲ. ಆದುದರಿಂದ ಈ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗದೇ ಪ್ರತಿ ವರ್ಷ ನಿಗಧಿಪಡಿಸುವ ಅನುದಾನವು ಉಳಿಕೆಯಾಗಿ ಮುಂದಿನ ಸಾಲುಗಳಿಗೆ ಮುಂದುವರೆಸಿಕೊಂಡು ಬರಲಾಗುತ್ತಿದೆ. ಆದ ಕಾರಣ ಉಲ್ಲೇಖ(2)ರ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನದಂತೆ ಪ್ರಮುಖವಾದ ಕಾರ್ಯಕ್ರಮಗಳನ್ನು ಮಾತ್ರ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ-01 ರಲ್ಲಿ ಪಟ್ಟಿ ಮಾಡಿದೆ ಹಾಗೂ ಕೈಬಿಡಲು ಉದ್ದೇಶಿಸಿರುವ 2012-13ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ-02 ರಲ್ಲಿ ಪಟ್ಟಿಮಾಡಿ ಸಮಿತಿಯ ಹಾಗು ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿದೆ.

### ಅನುಬಂಧ-01

**ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ**

## I ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–

### ಶೈಕ್ಷಣಿಕ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಫ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ |
| 2) | ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿ, ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಹಾಗೂ ಹೊಸದಾಗಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲು |
| 3) | ಸರ್ಕಾರದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ. |
| 4) | ಸರ್ಕಾರದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಭೋದನಾ ಶುಲ್ಕ, ಪರೀಕ್ಷಾ ಶುಲ್ಕದ ಮರುಪಾವತಿ |
| 5) | ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ. |
| 6) | ಪಾಲಿಕೆಯ ಪೌರಕಾರ್ಮಿಕ, ಗ್ಯಾಂಗ್ ಮ್ಯಾನ್ ಮತ್ತು ಮಾಲಿಗಳ ಮಕ್ಕಳಿಗೆ ಆರ್ಥಿಕ ಸಹಾಯ |

### ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ |
| 2) | ವಾಹನ ಚಾಲನ ತರಬೇತಿ |
| 3) | ಹೊಲಿಗೆ ತರಬೇತುದಾರರಿಗೆ ಶಿಷ್ಯವೇತನ (ಸ್ಟೈಫೆಂಡ್) |
| 4) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ–(ಅಭಿವೃದ್ಧಿ ನಿಗಮಗಳ/ಬ್ಯಾಂಕ್ ಸಾಲ ಪಡೆದ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯ ಧನ) |
| 5) | ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ ಮೈಕ್ರೋ ಕ್ರೆಡಿಟ್ ಯೋಜನೆಗೆ ಸಹಾಯ ಧನ |
| 6) | ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿವಿಕಾಸ ಕಾರ್ಯಾಗಾರ ನಡೆಸಲು |
| 7) | ವಿದ್ಯಾಭ್ಯಾಸವನ್ನು ಅಪೂರ್ಣಗೊಳಿಸಿರುವ ಶಾಲಾ / ಕಾಲೇಜು ಮಕ್ಕಳಿಗೆ ವೃತ್ತಿ ತರಬೇತಿ (ಟಿ.ವಿ./ವೀಡಿಯೋ ಮೆಕ್ಯಾನಿಕ್, ಪ್ಲಂಬರ್/ಎಲ್ಕ್ಟ್ರೀಷಿಯನ್/ಮೊಬೈಲ್/ಲ್ಯಾಬ್ ಟೆಕ್ನೀಷಿಯನ್) |
| 8) | ವಿವಿಧ ವೃತ್ತಿಯಲ್ಲಿ ತೊಡಗಿರುವವರಿಗೆ ಬೈಸೈಕಲ್ ವಿತರಣೆ |

### ಇತರೆ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ಹೊಸದಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲು |
| 2) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬದ ಮಕ್ಕಳಿಗೆ ಶಿಶುವಿಹಾರ/ ಬಾಲವಾಡಿಗಳನ್ನು ನಿರ್ಮಿಸಲು ಅನುದಾನ. |
| 3) | ವೈದ್ಯಕೀಯ ಸಹಾಯ / ಸೇವೆಗಳು, ದೌರ್ಜನ್ಯ, ನೈಸರ್ಗಿಕ ವಿಕೋಪಗಳಲ್ಲಿ ಬಲಿಯಾದವರಿಗೆ ಹಾಗೂ ಗಂಭೀರ ಸ್ವರೂಪದ ಕಾಯಿಲೆಗಳಿಂದ ಭಳಲುತ್ತಿರುವವರಿಗೆ ಆರ್ಥಿಕ ಸಹಾಯ |

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 4) | ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಕಾಲೋನಿಗಳ ಅಭಿವೃದ್ಧಿಗಾಗಿ ಕಲ್ಯಾಣ ಕಾರ್ಯಕ್ರಮಗಳು. |
| 5) | ಈಗಾಗಲೇ ರೂಪಿಸಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಯಾವುದಾದರು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು. |
| 6) | ಪಾಲಿಕೆ ವ್ಯಾಪ್ತಿಯಲ್ಲಿ ವಾಸವಾಗಿರುವ ಸಫಾಯಿ ಕರ್ಮಚಾರಿಗಳ ಸಮೀಕ್ಷೆಯನ್ನು ನಡೆಸಲು. |
| 7) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಾಂದ್ರಿತ ಪ್ರದೇಶಗಳಲ್ಲಿ ಗ್ರಂಥಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, |

## 2)ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ |
| 2) | ವಾಹನ ಚಾಲನ ತರಬೇತಿ |
| 3) | ಹಿಂದುಳಿದ ವರ್ಗಗಳ ಸಮುದಾಯದ ವೃತ್ತಿ ನಿರತರಿಗೆ ಅವರವರ ಕಸಬುಗಳಿಗೆ ಆರ್ಥಿಕ ಸಹಾಯ |
| 4) | ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ |
| 5) | ಉನ್ನತ ವ್ಯಾಸಂಗದಲ್ಲಿರುವ ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಮರುಪಾವತಿ |
| 6) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರು ಹಾಗೂ ಕಡಿಮೆ ವರಮಾನವುಳ್ಳ ಗ್ರೂಪ್ ಡಿ ನೌಕರರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ |
| 7) | ಹಿಂದುಳಿದ ವರ್ಗಗಳ ನಿರ್ದೇಶನಾಲಯ ನಡೆಸುತ್ತಿರುವ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ವಿದ್ಯಾರ್ಥಿನಿಲಯಗಳ ಅಭಿವೃದ್ಧಿ |
| 8) | ಎರಡು ಚಕ್ರದ ಸೈಕಲ್ ವಿತರಣೆ |

## 3)ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಹೊಲಿಗೆ/ನಿಟ್ಟಿಂಗ್/ಎಂಬ್ರಾಯಿಡರಿ/ಕಾಯರ್/ ತರಬೇತಿ ಶಿಕ್ಷಕರು / ಮೇಲ್ವಿಚಾರಕರು / ದುರಸ್ಥಿಗಾರರಿಗೆ ಸಿಬ್ಬಂದಿಗಳಿಗೆ ಗೌರವ ಧನ. |
| 2) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ |
| 3) | ಹೊಲಿಗೆ/ ನಿಟ್ಟಿಂಗ್/ ಎಂಬ್ರಾಯಿಡರಿ /ಕಾಯರ್/ ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ |
| 4) | ಹೊಲಿಗೆ/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿದಾರರಿಗೆ ಶಿಷ್ಯ ವೇತನ |
| 5) | ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಮತ್ತು ಹಾಲಿ ಕೇಂದ್ರಗಳಿಗೆ ಉಪಕರಣ ಗಳನ್ನು ಒದಗಿಸಲು |
| 6) | ಶೃಂಗಾರ ತರಬೇತಿ/ಗೃಹ ನಿರ್ವಹಣೆ ತರಬೇತಿ |
| 7) | ಅಪೆರಲ್ ಟ್ರೈನಿಂಗ್ & ಡಿಸೈನ್ ಸೆಂಟರ್ ಕೇಂದ್ರಗಳನ್ನು ಪ್ರಾರಂಭಿಸಲು |

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 8) | ಮಹಿಳಾ ಸ್ವಸಹಾಯ ಗುಂಪಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಸಹಾಯಧನ |
| 9) | ಮಹಿಳಾ ಪೌರಕಾರ್ಮಿಕ ವರ್ಗದವರಿಗೆ ಆರೋಗ್ಯ ಸ್ವಚ್ಚತೆಗೆ ಸಹಾಯಧನ |
| 10) | ನಿರ್ಗತಿಕ, ನೊಂದ, ದುರ್ಬಲ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಮಹಿಳಾ ಸಹಾಯ ಹಸ್ತ ಕೇಂದ್ರಗಳನ್ನು ಪ್ರಾರಂಭಿಸಲು (ಸ್ವಯಂ ಸಂಸ್ಥೆಗಳೊಂದಿಗೆ) |
| 11) | ಅಂಗನವಾಡಿ ಕೇಂದ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ |
| 12) | ಮಹಿಳಾ ಹಕ್ಕುಗಳ ಕಾರ್ಯಗಾರ |
| 13) | ಮಹಿಳೆಯರು ಸ್ವಂತ ಉದ್ಯೋಗ ಪ್ರಾರಂಭಿಸಲು ಸೀರೆ ವಿನ್ಯಾಸ, ಜರ್ದೋಷಿ ತರಬೇತಿ, ಮತ್ತು ಕಾಗದದ ಕೈಚೀಲಗಳ ತಯಾರಿಕೆ ಬಗ್ಗೆ ತರಬೇತಿ ನೀಡುವುದು. |

## 4)ವಿಕಲಚೇನತರ ಹಾಗೂ ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| | ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು |
| 1) | ವಿಕಲಚೇತನರಿಗೆ ವಿವಿದ ಉಪಕರಣಗಳನ್ನು ಒದಗಿಸುವುದು ಹಾಗು ಹೆಚ್ಚುವರಿ ಚಕ್ರ ಅಳವಡಿಸಿರುವ ದ್ವಿ ಚಕ್ರ ವಾಹನ ನೀಡುವುದು. |
| 2) | ವಿಕಲಚೇತನರಿಗೆ ಸೇವಾ ಕೇಂದ್ರಗಳು ಪ್ರಾರಂಭಿಸುವುದು (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 3) | ಮಾನಸಿಕ ಅಸ್ವಸ್ತರಿಗೆ ಧನ ಸಹಾಯ |
| 4) | ಪಾಲಿಕೆ ವ್ಯಾಪ್ತಿಯಲ್ಲಿನ ವಿಕಲಚೇತನರ ಸಮೀಕ್ಷೆ ಮಾಡುವುದು. |
| | **ಸಾಮಾನ್ಯ ವರ್ಗ ಹಾಗು ಹಿರಿಯ ನಾಗರಿಕರ ಕಲ್ಯಾಣ ಕಾರ್ಯಕ್ರಮಗಳು** |
| 5) | ಹಿರಿಯ ನಾಗರಿಕರಿಗೆ ಮದ್ಯಾಹ್ನದ ಬಿಸಿ ಊಟದ ಕಾರ್ಯಕ್ರಮ/ವೈದ್ಯಕೀಯ ಸೇವೆ |
| 6) | ಹಿರಿಯ ನಾಗರಿಕರಿಗೆ ಸೌಲಭ್ಯ ಕೇಂದ್ರ (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 7) | ಹಿಜ್ಡಿಡಾ/ಲೈಂಗಿಕ ಕಾರ್ಯಕರ್ತರು ಹಾಗೂ ಇತರೆ ವರ್ಗದವರಿಗೆ ಸಹಾಯ (ಸ್ವಯಂ ಸೇವಾ ಸಂಸ್ಥೆಗಳೊಂದಿಗೆ) |
| 8) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಪಾವತಿಸಲು (ಪೂರ್ವ ವಲಯಕ್ಕೆ ಮಾತ್ರ) |
| 9) | ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತಿ ಕೇಂದ್ರಕ್ಕೆ ಉಪಕರಣಗಳ ಸರಬರಾಜು (ಪೂರ್ವ ವಲಯಕ್ಕೆ ಮಾತ್ರ) |
| 10) | ಶಿಷ್ಯ ವೇತನ–ಎಲೆಕ್ಟ್ರಿಕಲ್ ವೈರ್‌ಮ್ಯಾನ್ ತರಬೇತುದಾರರಿಗೆ (ಪೂರ್ವ ವಲಯಕ್ಕೆ ಮಾತ್ರ) |
| 11) | ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಕಾರ್ಯಕ್ರಮ. |

## ಅನುಬಂಧ–02

## ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳದೆ ಕೈಬಿಡಲು ಉದ್ದೇಶಿಸಿರುವ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿ

## 1) ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–

### ಶೈಕ್ಷಣಿಕ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಸರ್ಕಾರದಿಂದ ಮಾನ್ಯತೆ ಪಡೆದ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮೆರಿಟ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ |
| 2) | ಪರಿಶಿಷ್ಠ ಜಾತಿ/ಪಂಗಡಕ್ಕೆ ಸೇರಿದ ಆಡಳಿತ ಮಂಡಳಿ ನಡೆಸುವ ಶಾಲಾ ಸಂಸ್ಥೆಗಳು/ವಿದ್ಯಾರ್ಥಿ ನಿಲಯಗಳಿಗೆ ಅನುದಾನ |
| 3) | ಕ್ರೀಡಾ ಚಟುವಟಿಕೆಗಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ. |
| 4) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಜೆ ವೇಳೆಯ ವಿಶೇಷ ತರಗತಿಗಳನ್ನು ನಡೆಸಲು ಶಾಲಾ/ಕಾಲೇಜುಗಳಿಗೆ ಆರ್ಥಿಕ ಸಹಾಯ. |
| 5) | ವಿದ್ಯಾಬ್ಯಾಸವನ್ನು ಅಪೂರ್ಣಗೊಳಿಸಿರುವ ಶಾಲಾ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ (ಪ್ರೇರಣೆ) |
| 6) | ವಿದ್ಯಾರ್ಥಿಗಳ ಶೈಕ್ಷಣಿಕ/ಅಧ್ಯಯನ ಪ್ರವಾಸಗಳಿಗೆ ಅದರ ವೆಚ್ಚವನ್ನು ಭರಿಸುವುದು. |
| 7) | ಉನ್ನತ ವ್ಯಾಸಂಗಕ್ಕಾಗಿ ಸಂದರ್ಶನಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ. |
| 8) | ಪದವಿ ಪೂರ್ವ ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡುವ ಕಾರ್ಯಕ್ರಮ. |

### ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಗಣಕಯಂತ್ರ ಹಾರ್ಡ್‌ವೇರ್ ತರಬೇತಿ |
| 2) | ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ |
| 3) | ಹೊಲಿಗೆ ತರಬೇತುದಾರರಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು |
| 4) | ಕಾಲ್ ಸೆಂಟರ್ / ಬಿ.ಪಿ.ಓ. ಸೆಂಟರ್ ತರಬೇತಿ |
| 5) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಸಹಯೋಗದ ವಸತಿ ನಿರ್ಮಾಣಕ್ಕಾಗಿ ಸಹಾಯ ಧನ |
| 6) | ಸಫಾಯಿ ಕರ್ಮಚಾರಿ, ಚರ್ಮಕಾರರು, ಕೊಳಚೆ ಪ್ರದೇಶಗಳ ನಿವಾಸಿಗಳು ಹಾಗೂ ಇತರರಿಗೆ ವಿಮಾ ಯೋಜನೆ |
| 7) | ಆಟೋ ಚಾಲಕರಿಗೆ ಸಾಮೂಹಿಕ ವಿಮೆ |
| 8) | ನೇಮಕಾತಿ ಪ್ರಾಧಿಕಾರ ಹಾಗೂ ಇತರೆ ಹುದ್ದೆಗಳ ನೇಮಕಾತಿಗಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ಆರ್ಥಿಕ ಸಹಾಯ. |
| 9) | ಜಿ.ಟಿ.ಟಿ.ಸಿ., ಎನ್.ಟಿ.ಟಿ.ಎಫ್., ಎನ್.ಐ.ಎಫ್.ಟಿ., ಎಸ್.ಎಂ.ಇ., ಹಾಗೂ ಇತರೆ ರಾಜ್ಯ/ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳ ತರಬೇತಿಗೆ ಅಭ್ಯರ್ಥಿಗಳ ಪ್ರಾಯೋಜನೆ. |
| 10) | ಸರ್ಕಾರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ನಿವೇಶನಗಳು/ಉದ್ದಿಮೆ ಶೆಡ್‌ಗಳ ಸ್ವಾಧೀನಕ್ಕೆ ಸಹಾಯಧನ ನೀಡುವ ಕಲ್ಯಾಣ ಕಾರ್ಯಕ್ರಮ. |

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 11) | ಹೊಸ ವಾರ್ಡ್‌ಗಳಲ್ಲಿ ಖಾಸಗಿಯಾಗಿ ಹೊಲಿಗೆ ತರಬೇತಿ ಪಡೆದವರಿಗೆ (ನಗರ ಪಾಲಿಕೆಯಿಂದ ತರಬೇತಿ ಪಡೆಯದೆ ಇರುವವರಿಗೆ) ಹೊಲಿಗೆ ಯಂತ್ರಗಳನ್ನು ಒದಗಿಸುವುದು. |
| 12) | ಮಾನವ ಸಂಪನ್ಮೂಲ ಅಭಿವೃದ್ಧಿ (ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ & ಕೆಪ್ಯಾಸಿಟಿ ಬಿಲ್ಡಿಂಗ್) |

## ಇತರೆ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಪಾಲಿಕೆ ವ್ಯಾಪ್ತಿಯಲ್ಲಿನ ಪ.ಜಾ/ಪ.ಪಂ. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಇತರೆ ಸ್ಥಿತಿಗತಿಗಳ ಕುರಿತು ಸಮೀಕ್ಷೆ ನಡೆಸುವುದು. |
| 2) | ಮಧ್ಯಪಾನ ಅಭ್ಯಾಸ ತ್ಯಜಿಸಲು ಮಧ್ಯಪಾನ ನಿಷೇಧ ಕಾರ್ಯಕ್ರಮ |
| 3) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಲಾ/ಕಾಲೇಜು ಮಕ್ಕಳಿಗೆ ಆರೋಗ್ಯ ವಿಮೆ |

## [2) ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಕಾಲ್ ಸೆಂಟರ್/ಬಿ.ಪಿ.ಓ. ಸೆಂಟರ್ ತರಬೇತಿ |
| 2) | ಗಣಕಯಂತ್ರ ಹಾರ್ಡ್‌ವೇರ್ ತರಬೇತಿ |
| 3) | ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ |
| 4) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಇವರ ಸಹಯೋಗದ ವಸತಿ ನಿರ್ಮಾಣಕ್ಕಾಗಿ ಸಹಾಯ ಧನ |
| 5) | ಕೊಳಚೆ ಪ್ರದೇಶಗಳ ನಿವಾಸಿಗಳು ಹಾಗೂ ಇತರರಿಗೆ ವಿಮಾ ಯೋಜನೆ |
| 6) | ಆಟೋ ಚಾಲಕರಿಗೆ ಸಾಮೂಹಿಕ ವಿಮೆ |
| 7) | ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಹಾಗೂ ಮಾಲಿಗಳ ಮಕ್ಕಳುಗಳಿಗೆ ಕಲ್ಯಾಣ ಕಾರ್ಯಕ್ರಮಗಳು. |
| 8) | ಮಾನವ ಸಂಪನ್ಮೂಲ ಅಭಿವೃದ್ಧಿ (ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ & ಕೆಪ್ಯಾಸಿಟಿ ಬಿಲ್ಡಿಂಗ್) |

## 3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳು:–

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 1) | 18 ವರ್ಷದೊಳಗಿನ ಅನಾಥ, ನಿರ್ಗತಿಕ, ಮಾನಸಿಕ ಅಸ್ವಸ್ಥರ ಮಕ್ಕಳಿಗೆ ನಡೆಸಲಾಗುವ ಸಂಸ್ಥೆಗಳಿಗೆ ಸಹಾಯಧನ ನೀಡುವುದು. |
| 2) | 14 ವರ್ಷದೊಳಗಿನ ಬಾಲಕಾರ್ಮಿಕರಿಗೆ, ಅನಾಥ ಮಕ್ಕಳಿಗೆ ವಿಶೇಷ ತರಬೇತಿ ಹಾಗೂ ಶೈಕ್ಷಣಿಕ ಕಾರ್ಯಕ್ರಮ. |

| ಕ್ರ ಸಂ | ಕಾರ್ಯಕ್ರಮಗಳ ವಿವರ |
|---|---|
| 3) | ಹೊಸ ವಾರ್ಡಗಳಲ್ಲಿ ಖಾಸಗಿಯಾಗಿ ತರಬೇತಿ ಪಡೆದವರಿಗೆ (ನಗರ ಪಾಲಿಕೆಯಿಂದ ತರಬೇತಿ ಪಡೆಯದೇ ಇರುವವರಿಗೆ) ಹೊಲಿಗೆ ಯಂತ್ರಗಳನ್ನು ಒದಗಿಸುವುದು. |
| 4) | ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ತರಬೇತಿಗೆ ಅಭ್ಯರ್ಥಿಗಳ ನಿಯೋಜನೆ. |

ತತ್ಸಂಬಂಧವಾಗಿ ಈ ಮೇಲ್ಕಂಡ ಅಂಶಗಳನ್ನು ಸಮಿತಿಯ ಆಧ್ಯಗಮನಕ್ಕೆ ತರುತ್ತಾ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಹಾಗು ಕೈ ಬಿಡಲು ಉದ್ದೇಶಿಸಿರುವ ಕಾರ್ಯಕ್ರಮಗಳ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಹಾಗೂ ಪಾಲಿಕೆ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ 16.08.2012ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಭಾಗಶ: ಒಪ್ಪುತ್ತಾ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಹಾಗೂ ಮೀಸಲಿಟ್ಟಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸುದೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

- ಹೆಚ್ಚು ಬೇಡಿಕೆಯಿರುವ ಅನುಬಂಧ-1ರಲ್ಲಿರುವ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ನೀಡಿ ಕ್ರಿಯಾ ಯೋಜನೆ ತಯಾರಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.
- ಅನುಬಂಧ-2 ರ ಕಾರ್ಯಕ್ರಮಗಳಿಗೆ ಒಂದು ವೇಳೆ ಬೇಡಿಕೆ ಬಂದಲ್ಲಿ, ಪರಿಶೀಲಿಸಿ ಅಗತ್ಯವಿರುವ ಅನುದಾನವನ್ನು ಕ್ರಿಯಾ ಯೋಜನೆ ರೂಪಿಸುವಾಗ **"ಇತರೇ ಕಾರ್ಯಕ್ರಮಗಳು"** ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ಮೀಸಲಿಟ್ಟು, ಜಂಟಿ ಆಯುಕ್ತರು (ಕಲ್ಯಾಣ) ರವರಿಂದ ಅನುಮತಿ ಪಡೆದು ಅನುಷ್ಠಾನಗೊಳಿಸುವುದು. (ಪಿ-2023)
- ಆಯವ್ಯಯ ಮಂಡನೆಯಲ್ಲಿ ಘೋಷಣೆಯಾದ ಹೊಸ ಕಾರ್ಯಕ್ರಮಗಳಿಗೂ ಸಹ ಮಾರ್ಗಸೂಚಿ ತಯಾರಿಸಿ ಈ ಸಾಲಿನಲ್ಲೇ ಅನುಷ್ಠಾನಗೊಳಿಸುವುದು.
- ಅನುಬಂಧ-1ರಲ್ಲಿರುವ ಕಾರ್ಯಕ್ರಮಗಳನ್ನು ಎಲ್ಲಾ ವಾರ್ಡಗಳ ಸದಸ್ಯರುಗಳಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡಿ, ಪ್ರಚುರಪಡಿಸುವುದು.
- ಆರ್ಥಿಕ ಸ್ವಾವಲಂಭನೆ ಯೋಜನೆಯಡಿ ಎಲ್ಲಾ ವರ್ಗದ ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗ ಪ್ರಾರಂಭಿಸಲು ಪಾಲಿಕೆ ವತಿಯಿಂದ ಕಾರು ಮತ್ತು ಸರಕು ಸಾಗಾಣೆ ವಾಹನವನ್ನು ಖರೀದಿಸಲು ಶೇಕಡ 25 ರಷ್ಟು ಸಹಾಯಧನವನ್ನು ಇದುವರೆವಿಗೂ ನೀಡುತ್ತಿದ್ದು, ಸದರಿ ಸಾಲಿನಲ್ಲಿ ಹೊಸದಾಗಿ ಆಟೋ ರಿಕ್ಷಾಗಳಿಗೂ ಸಹಾಯಧನವನ್ನು ನೀಡಲು ಉದ್ದೇಸಿದ್ದು, ಸರ್ಕಾರದ ವತಿಯಿಂದ ಪರ್ಮಿಟ್ ದೊರೆತಲ್ಲಿ ಆಟೋ ರಿಕ್ಷಾಗಳಿಗೂ ಸಹ ಸಹಾಯಧನವನ್ನು ನೀಡಲಾಗುವುದು.

**ಹೆಚ್ಚುವರಿ ವಿಷಯಗಳು:**

## 1. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 99/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:24.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪ್ಪುರ ವಲಯದ ಕೆ.ಆರ್.ಪುರ ಉಪವಿಭಾಗದ ವಾರ್ಡ್ ಸಂಖ್ಯೆ 52 ಕೆ.ಆರ್.ಪುರ ವಾರ್ಡಿನಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಲು ಒಂದು ಕಾರ್ಯಕ್ರಮವನ್ನು 2010-11 ಮತ್ತು 2011-12ನೇ ಸಾಲುಗಳಲ್ಲಿ ಅನ್ವಯಿಸುವಂತೆ, ಒಂದು ಕ್ರಿಯಾ ಯೋಜನೆಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಂಡ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ ಎಂದು ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ ಜ.ಆ(ಕ)ಪಿಆರ್/724/11-12 ದಿನಾಂಕ 03.03.2012ರಲ್ಲಿ ಸೂಚಿಸಿದ್ದು, ಇದರಲ್ಲಿ ಅರ್ಹ ಕುಟುಂಬಗಳನ್ನು ಗುರ್ತಿಸಿ ಕೆ.ಆರ್.ಪುರ ವಾರ್ಡಿಗೆ 33 ಸಂಖ್ಯೆ ಮೀರದಂತೆ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿತ್ತು. ಅದರಂತೆ, ಈ ಕಾರ್ಯಕ್ರಮಕ್ಕೆ ಕೆ.ಆರ್.ಪುರ ವಾರ್ಡ್ ಸಂಖ್ಯೆ 52 ಕ್ಕೆ ▫.99.00 ಲಕ್ಷಕ್ಕೆ ಒಟ್ಟು 33 ಫಲಾನುಭವಿಗಳ ಪಟ್ಟಿಯನ್ನು ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ದಿನಾಂಕ 05.06.2012ರಂದು ಸಭೆಗೆ ಮಂಡಿಸಿ ಸಭೆಯು ಫಲಾನುಭವಿಗಳನ್ನು ಕಛೇರಿ ಜ್ಞಾಪನಾ ಸಂಖ್ಯೆ:ಜಂ.ಆ/ಮವ/ಕಶಾ/01/12-13, ದಿನಾಂಕ 06.06.2012ರಲ್ಲಿ ಆಯ್ಕೆ ಮಾಡಿರುತ್ತದೆ. ಫಲಾನುಭವಿಗಳ ಆಯ್ಕೆ ಪಟ್ಟಿಯ ವಿವರಗಳನ್ನು ಈ ಕಡತದಲ್ಲಿ ಲಗತ್ತಿಸಿದೆ. ಕಾಮಗಾರಿಯು ಇಂತಿದೆ.

| Sl. No. | Ward No. | Name of Work | Approx. Value ▫.in lakhs |
|---|---|---|---|
| 1 | 52 | Construction of 33 nOs. Individual houses for backward/minority/BCM/Financialy weaker section | 99.00 |

ಈ ಕ್ರಿಯಾ ಯೋಜನೆಯ ಕಾಮಗಾರಿ ▫.99.00 ಲಕ್ಷಗಳಾಗಿದ್ದು, ಈ ಕಾಮಗಾರಿಗೆ 2012-13ನೇ ಸಾಲಿನ ಅಯವ್ಯಯದಲ್ಲಿ ಹಣಕಾಸು ಅನುದಾನ ಒದಗಿಸಿ, ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಜಾಬ್ ಕೋಡ್ ನೀಡಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 24.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

## 2. ವಿಷಯದ ಸಂಖ್ಯೆ : ಸಾನ್ಯಾಸ್ಥಾಸ 100/12-13:

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ:27.08.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯದ ಕೆ.ಆರ್.ಪುರ ಉಪವಿಭಾಗದ ವಾರ್ಡ್ ಸಂಖ್ಯೆ 55 ದೇವಸಂದ್ರ ವಾರ್ಡಿನಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಲು ಒಂದು ಕಾರ್ಯಕ್ರಮವನ್ನು 2010-11 ಮತ್ತು 2011-12ನೇ ಸಾಲುಗಳಿಗೆ ಅನ್ವಯಿಸುವಂತೆ, ಒಂದು ಕ್ರಿಯಾ ಯೋಜನೆಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಂಡ ನಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ ಎಂದು ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ ಜ.ಆ(ಕ)ಪಿಆರ್/724/11-12 ದಿನಾಂಕ 03.03.2012ರಲ್ಲಿ ಸೂಚಿಸಿದ್ದು, ಇದರಲ್ಲಿ ಅರ್ಹ ಕುಟುಂಬಗಳನ್ನು ಗುರ್ತಿಸಿ ವಾರ್ಡ್ ಸಂಖ್ಯೆ 55 ದೇವಸಂದ್ರಕ್ಕೆ 33 ಸಂಖ್ಯೆ ಮೀರದಂತೆ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿತ್ತು. ಅದರಂತೆ, ಈ ಕಾರ್ಯಕ್ರಮಕ್ಕೆ ವಾರ್ಡ್ ಸಂಖ್ಯೆ 55 ದೇವಸಂದ್ರ ಕ್ಕೆ ▫.99.00 ಲಕ್ಷಕ್ಕೆ ಒಟ್ಟು 33 ಫಲಾನುಭವಿಗಳ ಪಟ್ಟಿಯನ್ನು

ವಲಯ ಮಟ್ಟದ ಆಯ್ಕೆ ಸಮಿತಿಯಲ್ಲಿ ಮಂಜೂರು ಮಾಡಿದ್ದು, ಪಟ್ಟಿಯನ್ನ ಕಡತದಲ್ಲಿ ಲಗತ್ತಿಸಿದೆ. ಕಾಮಗಾರಿಯು ಇಂತಿದೆ.

| Sl. No. | Ward No. | Name of Work | Approx. Value ▫. in lakhs |
|---|---|---|---|
| 1 | 55 | Construction of 33 nos. Individual houses for backward/minority/BCM/Financialy weaker section | 99.00 |

ಈ ಕ್ರಿಯಾ ಯೋಜನೆಯ ಕಾಮಗಾರಿ ▫.99.00 ಲಕ್ಷಗಳಾಗಿದ್ದು, ಈ ಕಾಮಗಾರಿಗೆ ಹಣಕಾಸು ಅನುದಾನ ಒದಗಿಸಿ, ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಜಾಬ್ ಕೋಡ್ ನೀಡಲು ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ 27.08.2012ರ ಟಿಪ್ಪಣಿಯನ್ನು ಒಪ್ಪಲಾಯಿತು.

**(ಎಂ.ಕೃಷ್ಣಪ್ಪ)**